# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 Volume:02 • ಸಂಚಿಕೆ: 116 Issue: 116 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 05.11.2024 • ಮಂಗಳವಾರ Tuesday • ಪುಟ:04 Page:04 • ಬೆಲೆ:2 Rs:2









Greetings, Obituary Ads Starts from Rs.1000 94486 33038


# ಶಾಂತಿ ಕದಡಿದ ಕಾಂಗ್ರೆಸ್

## ಅನ್ನದಾತನಿಗೆ ವಕ್ಫ್ ನೋಟೀಸ್, ಎಲ್ಲೆಡೆ ಆಕ್ರೋಶ

ವಕ್ಫ್ ಮಂಡಲಿ ರದ್ದುಗೊಳಿಸಲು ಪ್ರತಿಭಟನೆಕಾರರ ಆಗ್ರಹ | ಜಿಲ್ಲಾದ್ಯಾಂತ ಬಿಜೆಪಿ ಕಾರ್ಯಕರ್ತರಿಂದ ಪ್ರತಿಭಟನೆ
ವಕ್ಫ್ ಸಚಿವ ಜಮೀರ್ ಅಹ್ಮದ್‌ರನ್ನು ಗಡಿಪಾರುಗೊಳಿಸಿ ಎಂದ ಪ್ರತಿಭಟನಾಕಾರರು | ಕಠಿಣ ಕಾನೂನು ಜಾರಿಗೆ ಒತ್ತಾಯ







**ಹಂಪಿ ಟೈಮ್ಸ್ ಹೊಸಪೇಟೆ/ಹರಪನಹಳ್ಳಿ**

ರೈತರ ಪಹಣಿಗಳಲ್ಲಿ ವಕ್ಫ್ ಮಂಡಳಿ ಆಸ್ತಿ ಎಂದು ನಮೂದಿಸಿ, ರೈತರು ಮತ್ತು ಹಿಂದೂ ಧಾರ್ಮಿಕ ಸಂಸ್ಥೆಗಳ ಜಮೀನು ಕಬಳಿಸಲು ಕಾಂಗ್ರೆಸ್ ಸರ್ಕಾರ ಹುನ್ನಾರ ನಡೆಸಿದೆ ಎಂದು ಆರೋಪಿಸಿ ಬಿಜೆಪಿ ಕಾರ್ಯಕರ್ತರು ಜಿಲ್ಲಾದ್ಯಂತ ಸೋಮವಾರ ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ಹರಪನಹಳ್ಳಿ ಪಟ್ಟಣದ ಕೊಟ್ಟೂರು ರಸ್ತೆಯಲ್ಲಿನ ಬಿಜೆಪಿ ಕಚೇರಿಯಿಂದ ಬೈಕ್‌ರ್‍ಯಾಲಿ ಮೂಲಕ ನಗರದ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ ತಹಸಿಲ್ದಾರರಿಗೆ ಮನವಿ ಸಲ್ಲಿಸಿದರು.

ಮಂಡಲ ಅಧ್ಯಕ್ಷ ಕೆ ಲಕ್ಷ್ಮಣ್ ಮಾತನಾಡಿ. ಸಚಿವ ಸ್ಥಾನದಲ್ಲಿದ್ದುಕೊಂಡು ರೈತರ ಜಮೀನನ್ನು ಕಬಳಿಸುವ ದುರುದ್ದೇಶದಿಂದ ಸಾಕಷ್ಟು ಅನ್ಯಾಯವೆಸಗಿರುವವರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಬೇಕು. ರಾಜ್ಯದ ಸುಭಿಕ್ಷೆ ಮತ್ತು ಶ್ರೇಯಸ್ಸನ್ನು ಬಯಸಬೇಕಿದ್ದವರೆ ಆಡಳಿತದಲ್ಲಿದ್ದುಕೊಂಡೆ ಇಂತಹ ಕೃತ್ಯಕ್ಕೆ ಮುಂದಾಗಿರುವುದು ಮತದಾರರ ದುರಂತವೇ ಸರಿ ಎಂದರು.

ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಕಣಿವಿಹಳ್ಳಿ ಮಂಜುನಾಥ್ ಮಾತನಾಡಿ, ಶಾಂತಿ ಮತ್ತು ಸಾಮರಸ್ಯದ ರಾಜ್ಯದಲ್ಲಿ ಕೇವಲ ಒಂದು ಕೋಮಿಗೆ ಸೀಮಿತ ಮಾಡಲು >>4

> ಕಾಂಗ್ರೆಸ್ ಸರ್ಕಾರ ಕರ್ನಾಟಕವನ್ನು ಪಾಕಿಸ್ತಾನ ಮಾಡಲು ಹೊರಟಿದೆ. ಹಿಂದೂ ವಿರೋಧಿ ಸರ್ಕಾರವು ಅನ್ನದಾತನ ಭೂಮಿಗೂ ಕೈಹಾಕಿದೆ.ಇದೀಗ ನೋಟೀಸು ಹಿಂಪಡೆಯಲು ಮುಂದಾಗಿರುವುದು ನಾಚಿಕೆಗೇಡಿನ ಹಾಗೂ ಕಣ್ಣೊರಿಸುವ ತಂತ್ರವಾಗಿದೆ. ರೈತರಿಗೆ ಕಿರುಕುಳ ನೀಡುವುದನ್ನು ಬಿಜೆಪಿ ಸಹಿಸಲ್ಲ. ವಕ್ಫ್ ಸಚಿವರನ್ನು ಗಡಿಪಾರು ಮಾಡಬೇಕು
>
> – **ಚನ್ನಬಸವನಗೌಡ,** ಜಿಲ್ಲಾಧ್ಯಕ್ಷ, ಬಿಜೆಪಿ ವಿಜಯನಗರ.

## ಮೈಕ್ರೋ ನ್ಯೂಸ್

### ನ.೦೮ ರಂದು ಸಾರಿಗೆ ಅದಾಲತ್

**ಹಂಪಿ ಟೈಮ್ಸ್ ಬಳ್ಳಾರಿ**

ಬಳ್ಳಾರಿ ಪ್ರಾದೇಶಿಕ ಸಾರಿಗೆ ಇಲಾಖೆಯಿಂದ ಸಾರಿಗೆ ಅದಾಲತ್ ಕಾರ್ಯಕ್ರಮವನ್ನು ನ.08 ರಂದು ಸಂಜೆ 04.30 ಗಂಟೆಗೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿಯಲ್ಲಿ ಹಮ್ಮಿಕೊಳ್ಳಲಾಗಿದೆ. ಕುಂದುಕೊರತೆಗಳಿರುವ ಸಾರ್ವಜನಿಕರು ಅರ್ಜಿ ಸಲ್ಲಿಸುವ ಮೂಲಕ ಕುಂದುಕೊರತೆಗಳನ್ನು ಇತ್ಯರ್ಥಪಡಿಸಿಕೊಳ್ಳಬಹುದು.

ಸಾರ್ವಜನಿಕರು ಸಾರಿಗೆ ಅದಾಲತ್‌ನ ಉಪಯೋಗ ಪಡೆದುಕೊಳ್ಳುವ ಮೂಲಕ ಬಾಕಿ ಇರುವ ತಮ್ಮ ಅರ್ಜಿಗಳನ್ನು ಪೂರ್ಣಗೊಳಿಸಿಕೊಳ್ಳಬೇಕು ಎಂದು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಎನ್‌ಎಂಹೆಚ್ ಅಡಿ ಕೌನ್ಸಿಲರ್ಸ್ ಆಯ್ಕೆ ಪಟ್ಟಿ ಪ್ರಕಟ

**ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಜಿಲ್ಲಾ ಕುಷ್ಠರೋಗ ನಿರ್ಮೂಲನ ಅಧಿಕಾರಿಗಳ ಕಚೇರಿಯಿಂದ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಗೌರವಧನದ ಆಧಾರದ ಮೇಲೆ ಮಂಜೂರಾಗಿರುವ ಮೂರು ಕೌನ್ಸಿಲರ್ಸ್ ನೇಮಕಾತಿ ಆಯ್ಕೆ ಪಟ್ಟಿ ಪ್ರಕಟಿಸಲಾಗಿದೆ.

ಅರ್ಜಿ ಸಲ್ಲಿಸಿದವರ ಪಟ್ಟಿ, ತಾತ್ಕಾಲಿಕ ಆಯ್ಕೆ, ಕಾಯ್ದಿರಿಸಿದ ಆಯ್ಕೆ ಪಟ್ಟಿ, ತಿರಸ್ಕರಿಸಿದ ಪಟ್ಟಿಗಳನ್ನು ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿಗಳ ಕಚೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಿದ್ದು, ಇದಕ್ಕೆ ಸಂಬಂಧಿಸಿದಂತೆ ಆಕ್ಷೇಪಣೆಗಳಿದ್ದಲ್ಲಿ ನವೆಂಬರ್ 8 ರೊಳಗಾಗಿ ಸಲ್ಲಿಸಲು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

# ಕಾರ್ತೀಕ ದೀಪೋತ್ಸವಕ್ಕೆ ಉಜ್ಜಯಿನಿ ಶ್ರೀಗಳಿಂದ ಚಾಲನೆ



**ಹಂಪಿ ಟೈಮ್ಸ್ ಕೊಟ್ಟೂರು**


ಕಾರ್ತಿಕ ಮಾಸದ ಪ್ರಯುಕ್ತ ಪ್ರತಿ ವರ್ಷದ ಧಾರ್ಮಿಕ ಪರಂಪರೆಯಂತೆ ತಾಲೂಕಿನ ಉಜ್ಜಯಿನಿ ಮಹಾ ಪೀಠದಲ್ಲಿ ಜಗದ್ಗುರು ಸಿದ್ಧಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳು ದೀಪ ಬೆಳಗುವ ಮೂಲಕ ಶ್ರೀ ಕ್ಷೇತ್ರನಾಥ ಜಗದ್ಗುರು ಮರುಳಸಿದ್ದೇಶ್ವರ ಸ್ವಾಮಿಯ ಪ್ರಾರಂಭದ ಕಾರ್ತಿಕ ಉತ್ಸವಕ್ಕೆ ಶನಿವಾರ ಚಾಲನೆ ನೀಡಿ ಆಶೀರ್ವಚನ ನೀಡಿದರು.

ಡಿಸೆಂಬರ್–14 ರಂದು ಜರುಗುವ ಶ್ರೀ ಮರುಳಸಿದ್ದೇಶ್ವರ ಸ್ವಾಮಿಯ ಕಾರ್ತಿಕೋತ್ಸವಕ್ಕೆ ನಾಡಿನ ಸಮಸ್ತ ಭಕ್ತಾದಿಗಳು ಆಗಮಿಸಿ ಶ್ರೀ ಪೀಠದಲ್ಲಿನ ದೀಪಾಲಂಕಾರವನ್ನು ಕಣ್ತುಂಬಿಕೊಂಡು ಶ್ರೀ ಮರುಳಸಿದ್ದೇಶ್ವರ ಸ್ವಾಮಿಯ ಕೃಪೆಗೆ ಪಾತ್ರರಾಗಬೇಕೆಂದು ತಿಳಿಸಿದರು.

ದೀಪೋತ್ಸವಕ್ಕೆ ಚಾಲನೆ ನೀಡುವ ಮುನ್ನ ಗೋಧೂಳಿ ಲಗ್ನದಲ್ಲಿ ಗೋ ಪೂಜೆಯನ್ನ ನೆರವೇರಿಸಲಾಯಿತು. ಈ ಸಂದರ್ಭದಲ್ಲಿ ಉಜ್ಜಯಿನಿ ಗ್ರಾಮ ಪಂಚಾಯಿತಿ ಉಪಾಧ್ಯಕ್ಷರಾದ ಪುಷ್ಪವತಿ ರೇವಣಸಿದ್ದಪ್ಪ, ಸದಸ್ಯರಾದ ಬಂಗಾರಿ ಶಿವಣ್ಣ, ಕುರುಗೋಡು ಸಿದ್ದೇಶ್, ಪೀಠದ ವ್ಯವಸ್ಥಾಪಕರು ವೀರೇಶ್, ಪುರೋಹಿತರಾದ ಸಿದ್ದಲಿಂಗಯ್ಯ ಸದ್ಭಕ್ತರು ಹಾಗೂ ಶ್ರೀ ಪೀಠದ ಸಿಬ್ಬಂದಿ ವರ್ಗ ಪಾಲ್ಗೊಂಡಿದ್ದರು.

## ಸಂಡೂರು ವಿಧಾನಸಭೆ ಉಪಚುನಾವಣೆ

# 27.50 ಲಕ್ಷ ನಗದು ಹಣ ಜಪ್ತಿ



**ಹಂಪಿ ಟೈಮ್ಸ್ ಸಂಡೂರು**

ಸಂಡೂರು ವಿಧಾನಸಭೆ ಉಪಚುನಾವಣೆ ಹಿನ್ನಲೆಯಲ್ಲಿ ಸಂಡೂರು ವ್ಯಾಪ್ತಿಯ ಡಿ.ಬಸಾಪುರ ಗ್ರಾಮದ ಚೆಕ್‌ಪೋಸ್ಟ್‌ನಲ್ಲಿ ಭಾನುವಾರ ಸೂಕ್ತ ದಾಖಲೆ ಇಲ್ಲದ 27,50,000 ರೂ. ನಗದು ಹಣವನ್ನು ಜಪ್ತಿ ಮಾಡಲಾಗಿದೆ ಎಂದು ಸಂಡೂರು ವಿಧಾನಸಭೆ ಉಪಚುನಾವಣೆಯ ಚುನಾವಣಾಧಿಕಾರಿ ರಾಜೇಶ್.ಹೆಚ್.ಡಿ ಅವರು ತಿಳಿಸಿದ್ದಾರೆ.

ಎಸ್‌ಎಸ್‌ಟಿ ತಂಡದ ಮುಖ್ಯಸ್ಥ ಅಲಗೇರಿ ಲಿಂಗಪ್ಪ ಅವರ ತಂಡವು ಜಪ್ತಿ ಮಾಡಿದ್ದು, 10 ಲಕ್ಷಕ್ಕಿಂತ ಹೆಚ್ಚು ಹಣ ಕಂಡುಬಂದಿದ್ದರಿಂದ ಆದಾಯ ತೆರಿಗೆ ಇಲಾಖೆಗೆ ಹಸ್ತಾಂತರಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕರ್ನಾಟಕ ರೈತ ಸಮೃದ್ಧಿ ಯೋಜನೆಯಡಿ ಸಹಾಯಧನಕ್ಕಾಗಿ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ಕೃಷಿ ಕ್ಷೇತ್ರವನ್ನು ಸುಸ್ಥಿರ ಹಾಗೂ ಲಾಭದಾಯಕವಾಗಿಸಲು ವಿವಿಧ ರೈತಪರ ಯೋಜನೆಗಳನ್ನು ಒಗ್ಗೂಡಿಸಿ, ಸಮಗ್ರ ಕೃಷಿಯನ್ನು ಉತ್ತೇಜಿಸಲು "ಕರ್ನಾಟಕ ರೈತ ಸಮೃದ್ಧಿ ಯೋಜನೆಯನ್ನು ಅನುಷ್ಠಾನಗೊಳಿಸಲು ಸ್ಥಳೀಯ ರೈತರಿಂದ ಅರ್ಜಿ ಆಹ್ವಾನಿಸಲಾಗಿದೆ.

2024–25 ನೇ ಸಾಲಿನ ರೈತ ಸಮೃದ್ಧಿ ಯೋಜನೆಯಡಿ ಘಟಕಗಳನ್ನು ಅನುಷ್ಠಾನಗೊಳಿಸಲು ಸಾಮಾನ್ಯ ವರ್ಗದ ರೈತರಿಗೆ 50% ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ರೈತರಿಗೆ 90% ಸಹಾಯಧನ ನೀಡಲಾಗುತ್ತಿದ್ದು, ಜಿಲ್ಲೆಯ ಎಲ್ಲಾ ತಾಲ್ಲೂಕಿನ ಅರ್ಹ ರೈತರಿಂದ ಹಾಗೂ ರೈತ ಉತ್ಪಾದಕ ಸಂಸ್ಥೆಗಳು (ಎಫ್‌ಪಿಓ), ಸಾವಯವ ರೈತರ ಒಕ್ಕೂಟಗಳು, ಮಹಿಳಾ ಸ್ವಸಹಾಯ ಸಂಘಗಳು ಮತ್ತು ರೈತ ಗುಂಪುಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿಗಳನ್ನು ರೈತ ಸಂಪರ್ಕ ಕೇಂದ್ರಗಳಲ್ಲಿ ಅಥವಾ ಸಹಾಯಕ ಕೃಷಿ ನಿರ್ದೇಶಕರ ಕಛೇರಿಗೆ ಸಲ್ಲಿಸಬೇಕು.

**ಯೋಜನೆಗಳ ಘಟಕಗಳು:** ಸಮಗ್ರ ಕೃಷಿ ಪದ್ಧತಿಯಡಿ ಕೃಷಿ ಹೊಂಡ ಹಾಗೂ ಪಾಲಿಥೀನ್ ಹೊದಿಕೆ, ಬೆಳೆ ಪದ್ಧತಿ ಆಧಾರಿತ ಪ್ರಾತ್ಯಕ್ಷಿಕ, ಪಶು ಸಂಗೋಪನಾ ಘಟಕಗಳು, ಇತರೆ ಚಟುವಟಿಕೆಗಳು.

**ರೈತ ಉತ್ಪಾದಕ ಸಂಸ್ಥೆಗಳು:** ಸಾವಯವ ರೈತರ ಒಕ್ಕೂಟಗಳು (ಎಫ್‌ಪಿಓ), ಮಹಿಳಾ ಸ್ವಸಹಾಯ ಸಂಘಗಳು ಮತ್ತು ರೈತ ಗುಂಪುಗಳಿಗೆ ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮ, ಬ್ರಾಂಡಿಂಗ್ ಮತ್ತು ಮಾರುಕಟ್ಟೆ ಕಲ್ಪಿಸುವ ಕಾರ್ಯಕ್ರಮಗಳು : ಬ್ರಾಂಡ್ ಅಭಿವೃದ್ಧಿ, ಲಾಗೋ ವಿನ್ಯಾಸ, ಪ್ಯಾಕೇಜಿಂಗ್, ವಿನ್ಯಾಸಕ್ಕಾಗಿ ಆರ್ಥಿಕ ನೆರವು, ಮೌಲ್ಯವರ್ಧನೆ ಸರಪಳಿಯಲ್ಲಿನ ಚಟುವಟಿಕೆಗಳ ಉನ್ನತೀಕರಣ, ಬಲವರ್ಧನೆ.

**ರೈತರಿಗೆ ಮಾರ್ಗದರ್ಶನ:** ಮಣ್ಣು ಮಾದರಿ ಸಂಗ್ರಹಣೆ, ಮಣ್ಣು ಆರೋಗ್ಯ ಚೀಟಿಗಳ ಶಿಫಾರಸ್ಸಿನಂತೆ ರೈತರಿಗೆ ಮಾರ್ಗದರ್ಶನ ಮಾಡುವ ನಿಟ್ಟಿನಲ್ಲಿ ನೆರವು ನೀಡಲಾಗುತ್ತದೆ ಎಂದು ಜಂಟಿ ಕೃಷಿ ನಿರ್ದೇಶಕ ಶರಣಪ್ಪ ಮುದಗಲ್ ತಿಳಿಸಿದ್ದಾರೆ.

# ತವರು ಹರಸಿ ಒಗ್ಗಟ್ಟು ಪ್ರದರ್ಶಿಸಿದ ಲಂಬಾಣಿ ಮಹಿಳೆಯರು

## ದೀಪಾವಳಿಯಲ್ಲಿ ಪ್ರಕೃತಿ ಆರಾಧನೆ | ಕಾಳಿಮಾಸ್, ದಾವಳಿ ಆಚರಣೆಯಲ್ಲಿ ಲಂಬಾಣಿ ಯುವತಿಯರಿಂದ ಹಾಡು, ಕುಣಿತ

**ಎಚ್.ರವಿಕುಮಾರ್**
**ಹಂಪಿ ಟೈಮ್ಸ್ ಮರಿಯಮ್ಮನಹಳ್ಳಿ**

ಬಂಜಾರ ಸಮುದಾಯದ ಮಹಿಳೆಯರಿಗೆ ದೀಪಾವಳಿ ಹಬ್ಬವು ತವರು ನೆಲವನ್ನು ಹರಸುವ ಹಬ್ಬವಾಗಿದೆ. ಮರಿಯಮ್ಮನಹಳ್ಳಿ ಹೋಬಳಿ ವ್ಯಾಪ್ತಿಯ ತಾಂಡಗಳಲ್ಲಿ ವಿಭಿನ್ನ ಸಂಪ್ರದಾಯದೊಂದಿಗೆ ಹಿರಿಯರ ಕಾಲದಿಂದಲೂ ಆಚರಿಸಿಕೊಂಡ ಬರುತ್ತಿರುವ ಕಾಳಿಮಾಸ್ ಮತ್ತು ದಾವಳಿ ಆಚರಣೆಯನ್ನು ಯುವತಿಯರು, ಮಹಿಳೆಯರು ಸಂಭ್ರಮದಿಂದ ಆಚರಿಸಿದರು.

ಹೋಬಳಿ ವ್ಯಾಪ್ತಿಯಲ್ಲಿ ಗುಂಡ ಸ್ಟೇಷನ್ ತಾಂಡಾ.ಮರಿಯಮ್ಮನಹಳ್ಳಿ ತಾಂಡಾ, ತಾಳೆ ಬಸಾಪುರ ತಾಂಡಾ, ನಾಗಲಾಪುರ ತಾಂಡಾ, ಗುಂಡ ತಾಂಡಾಗಳಲ್ಲಿ ಈ ದೀಪಾವಳಿ ಹಬ್ಬ ಪೂರ್ವಜರನ್ನು ನೆನಪಿಸಿಕೊಳ್ಳುವ ಮತ್ತು ತಾಂಡದಲ್ಲಿ ಎರಡು ದಿವಸ ಪರಸ್ಪರ ದ್ವೇಷ ಕೋಪ ಮರೆತು ಒಂದಾಗಿಸುವ ಜ್ಞಾನ ಜ್ಯೋತಿಯ ಪ್ರತಿಕಾವಾಗಿ ಬಂಜಾರರು ಬೆಳಕಿನ ಹಬ್ಬ ದೀಪಾವಳಿ ಆಚರಣೆಯಲ್ಲಿ, ಹೊಸ ಉಡುಪುಗಳನ್ನು ತೊಟ್ಟು ಲವಲವಿಕೆಯಿಂದ ಪಾಲ್ಗೊಂಡಿದ್ದರು.



**ಕಾಳಿಮಾಸ್:** ಮೊದಲ ದಿನ ಅಮವಾಸ್ಯೆ ನಿಮಿತ್ತ ತಾಂಡದ ನಾಯ್ಕ್ ಡಾವ್. ಕಾರ್ಬಾರಿ ದೈವಸ್ಥರು ಮತ್ತು ಮುಖಂಡರು ಸೇರಿ ಹಣವನ್ನು ಕೂಡಿಸಿಕೊಂಡು ಅಂದು ಸಂಜೆ ಸಳೋಯಿ(ಲಾಕಿ) ಹೆಸರಿನ ಮಾಂಸದ ಅಡುಗೆ ತಯಾರಿಸುತ್ತಾರೆ. ಕಾಳಿಮಾತೆ ಪ್ರತಿಷ್ಠಾಪಿಸಿ ಮಾಂಸದ ನೈವೇದ್ಯ ಅರ್ಪಿಸಿ ಧನಕರುಗಳಿಗೆ ಸಾಂಕ್ರಾಮಿಕ ರೋಗ ರುಜಿನಿಗಳು ಬಾರದಂತೆ ರಕ್ಷಿಸು ಎಂದು ದೇವರನ್ನು ಪ್ರಾರ್ಥಿಸುತ್ತಾರೆ. ನಂತರ ತಾಂಡದ ಮದುವೆಯಾಗದ ಯುವತಿಯರು ಲಂಬಾಣಿ ಸಂಪ್ರದಾಯದ ವಿಶಿಷ್ಟ ವೇಷ ಪೇಟಿಯ ಕಾಚಲಿ ಹೀಗೆ ಹಲವೂ ಬಗೆಯ ಉಡುಗೆಯೊಂದಿಗೆ ತಾಂಡದ ದೇವಸ್ಥಾನದ ಮುಂದೆ ದೇವರಿಗೆ ಹಿರಿಯರ ಅನುಮತಿ ಪಡೆದು ದೀಪ ಕೈಯಲ್ಲಿ ಹಿಡಿದು ತಾಂಡದ ಮನೆ ಮನೆಗೆ ಹೋಗಿ ಕುಟುಂಬಕ್ಕೆ ಮತ್ತು ಇಡೀ ಮನಕುಲಕ್ಕೆ ಒಳಿತಾಗಲೆಂದು ಹಾರೈಸುವ ಮೇರಾ ಆರತಿ ಮಾಡುತ್ತ ಲಂಬಾಣಿ ಭಾಷೆಯಲ್ಲಿ ಹಾಡುತ್ತಾ ಕುಲ ದೇವರಲ್ಲಿ ಬೇಡಿಕೊಳ್ಳುತ್ತಾರೆ.

**ದಾವಳಿ:** ದೀಪಾವಳಿ ಅಮಾವಾಸ್ಯೆ ಮಾರನೇ ದಿನ ವಿಶೇಷವಾಗಿದೆ. ದಬಕರ್ ದೇರೋ ಅಥವಾ ಹೋಮ ಮನೆಯಲ್ಲಿ ಸೌದೆ ಓಲೆಯಲ್ಲಿ ಕಟ್ಟಿಗೆಯಿಂದ ಬೆಂಕಿ ಹಚ್ಚಿ ಸಿಹಿ ಅಡುಗೆ ಗೋಟಿ ಗಾಟಿ (ಸಿಹಿ ಮುದ್ದೆ) ಬೆಂಕಿಯಲ್ಲಿ ತುಪ್ಪದ ಜೊತೆ ಎಡಿ ನೀಡಿ ಹಿರಿಯರಿಗೆ ನೆನೆಸಿ ಅವರಿಗೆ ಅರ್ಪಿಸುವ ಮತ್ತು ಅಗ್ನಿ ದೇವನಿಗೆ ಸ್ಮರಿಸುವ ಈ ಸಂಪ್ರದಾಯವನ್ನು ಅವರು ಸುಮಾರು ಶತಮಾನಗಳಿಂದ ನಡೆಸಿಕೊಂಡು >>3

> ದೀಪಾವಳಿಯಲ್ಲಿ ನಮ್ಮ ಲಂಬಾಣಿ ಜನಾಂಗದ ಸಹೋದರಿಯರು ತವರು ನೆಲವನ್ನು ಹರಸುತ್ತಾರೆ. ಪೂರ್ವಿಕರನ್ನೂ ನೆನೆಯುವ ಅಪ್ಪಟ ಬುಡಕಟ್ಟು ಜನರ ಹಬ್ಬವಾಗಿದೆ. ವಿಶಿಷ್ಟವೇಷ ಭೂಷಣದಿಂದ ತನ್ನದೇ ಆದ ಸಂಸ್ಕೃತಿ ಸಂಸ್ಕಾರದ ರೀತಿಯಲ್ಲಿ ಆಚರಿಸಿಕೊಂಡು ಬರಲಾಗುತ್ತಿದೆ ಹಾಗೂ ಸದಾ ಪ್ರಕೃತಿ ಆರಾಧನೆಯೇ ನಮ್ಮ ಸಂಪ್ರದಾಯದ ವೈಶಿಷ್ಟವಾಗಿದೆ.
>
> – **ಅಲೋಕ್ ನಾಯ್ಕ, ಅಧ್ಯಕ್ಷರು**
> ವಿಶ್ವ ಗೋರ್ ಕಟ್ಟಾಳೋ ಗುಂಡ ಸ್ಟೇಷನ್ ತಾಂಡಾ

# ವ್ಯಕ್ತಿ ಕಾಣೆ

**ಹಂಪಿ ಟೈಮ್ಸ್ ಹೊಸಪೇಟೆ**



ತಾಲೂಕಿನ ಕೊಂಡನಾಯಕನಹಳ್ಳಿ ಗ್ರಾಮದ ನಿವಾಸಿ ಹೆಚ್.ಮಂಜುನಾಥ (38) ತಂದೆ ದೇವರೆಡ್ಡಿ ಹೆಬ್ಬಾಳ್ ಕಳೆದ ವಾರದ ಹಿಂದೆ ನಾಪತ್ತೆಯಾಗಿದ್ದು ಹೊಸಪೇಟೆ ಗ್ರಾಮೀಣ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ. ನಾಪತ್ತೆಯಾದ ವ್ಯಕ್ತಿ 5.6 ಅಡಿ ಎತ್ತರ ಇದ್ದು, ಗೋಧಿ ಮೈ ಬಣ್ಣ, ಸಾಧಾರಣಾ ಮೈಕಟ್ಟು, ದುಂಡು ಮುಖ, ಆತನ ಬಲ ಕೈ ಮೇಲೆ ಬರೆ ಹಾಕಿರುವ ಚುಟಿಕಿ ಗುರುತು ಇದೆ. ಬಿಳಿ, ಕಪ್ಪು, ಹಸಿರು ಅಡ್ಡಗೇರೆಯುಳ್ಳ ಟೀಶರ್ಟ್ ಹಾಗೂ ನಶೆ ಬಣ್ಣದ ಪ್ಯಾಂಟ್ ಧರಿಸಿದ್ದಾನೆ. ಕನ್ನಡ ಭಾಷೆ ಬಲ್ಲವನಾಗಿದ್ದು, ಸಾರ್ವಜನಿಕರ ಗಮನಕ್ಕೆ ಬಂದಲ್ಲಿ ಕೂಡಲೇ ಹೊಸಪೇಟೆ ಕಂಟ್ರೋಲ್ ರೂಂ: 9480805700, ಗ್ರಾಮೀಣ ಠಾಣೆ 08394 228233, ಪಿಐ 9480805746 ದೂರವಾಣಿ ಸಂಖ್ಯೆಗಳಿಗೆ ಕರೆ ಮಾಡಿ ಮಾಹಿತಿ ನೀಡಬೇಕೆಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನಗುವಿನಿಂದ ಆರೋಗ್ಯ

ಅಬ್ಬಾ ಮುಂದೊಂದು ದಿನ ನಗು ಅಂದರೆ ಏನು ಅಂತಾ ಕೇಳುವ ಸ್ಥಿತಿಗೆ ಬರತ್ತೀವೇನೋ ನಾವುಗಳು ಅಲ್ವಾ ಯಾಕೆಂದ್ರೆ ನಮಗೆ ಸಮಯವೇ ಇಲ್ಲ ಅದೆಷ್ಟು ಒತ್ತಡದ ಬದುಕನ್ನ ಬದುಕತ್ತಿದ್ದೀವೀ ಅಂದರೆ ಮನೆಯವರ ಜೊತೆಗೆ ಮನಸ್ಸು ಬಿಚ್ಚಿ ಮಾತಾಡಲ್ಲ ನಾವು ಮಾತಾನಾಡೋದು ನಗೋದು ಸೋಷಲ್ ಮೀಡಿಯಾದಲ್ಲಿ ಇಮೋಜಿ ಅಲ್ಲೇ ಮತ್ತೇ ಪುರುಸೊತ್ತಿಲ್ಲ ಎಂದರೂ ಆಶ್ಚರ್ಯವಾಗದು. ಸದಾ ನಗುತ್ತಿರುವವರು ಆರೋಗ್ಯ ಪೂರ್ಣರಂತೆ ಗೋಚರಿಸುತ್ತಾರೆ. ನಗು ಒಂದು ರೀತಿಯ ಒತ್ತಡ ನಿವಾರಕವೂ ಹೌದು ದೇಹಕ್ಕೆ ವ್ಯಾಯಾಮ ಹೌದು.



ನಗುತ್ತಿರುವಾಗ ಒಬ್ಬ ವ್ಯಕ್ತಿಯ ಹೃದತದ ಬಡಿತ ನಿಮಿಷಕ್ಕೆ 120 ತಲುಪುತ್ತದೆ. ನಗುವಿನಿಂದ ನಮ್ಮ ರಕ್ತದ ಒತ್ತಡ ಕಡಿಮೆ ಆಗಿ ರಕ್ತ ಪರಿಚಲನೆ ಹೆಚ್ಚುತ್ತದೆ. ನಗುವಿನಿಂದ ಮಾಂಸಖಂಡ ಕುತ್ತಿಗೆಯ ನರಗಳ ಬಿಗಿತ ಕಡಿಮೆಯಾಗುತ್ತದೆ. ನಗು ಶಾಸ್ವಕೋಶವನ್ನು ಹಿಗ್ಗಿಸಿ ರಕ್ತದಲ್ಲಿ ಆಮ್ಲಜನಕ ವೃದ್ಧಿಯಾಗುವಂತೇ ಮಾಡುತ್ತದೆ ಹಾಗೆಯೇ ಶ್ವಾಸನಾಳಗಳನ್ನು ಸ್ವಚ್ಛಗೊಳಿಸುತ್ತದೆ. ನಗುವುದರಿಂದ ನಮ್ಮ ಮಿದುಳಿನಲ್ಲಿ ಎಂಡಾರ್ಫಿನ್ ಗಳೆಂಬ ನರವಾಹಗಳು ಬಿಡುಗಡೆಯಾಗುತ್ತದೆ. ಎಂಡಾರ್ಫಿನ್‌ಗಳು ಯಾವುದೇ ಅಡ್ಡ ಪರಿಣಾಮ ಉಂಟು ಮಾಡದೇ ನಮ್ಮನ್ನು ನಿದ್ರಾಸ್ಥಿತಿಗೆ ಒಯ್ಯತ್ತವೆ. ನಗು ಮಾನಸಿಕ ಒತ್ತಡವನ್ನು ಕಡಿಮೆ ಮಾಡಿ ಮನಸ್ಸಿಗೆ ಸಮಾಧಾನ ನೀಡುತ್ತದೆ. ನಗುವಿನಲ್ಲಿ ಏನೋ ಒಂದು ರೀತಿಯ ಶಕ್ತಿ ಇದೆ. ನಗುವನ್ನು ಚಿಕಿತ್ಸೆಯಾಗಿ ಬಳಸಬಹುದು ಎಂದು ಪ್ರೊಫೆಸರ್ ಮಾರ್ಕೊ ಸಫಿ ಸಲಹೆ ನೀಡಿದ್ದಾರೆ. "ಹೃದಯ ಕಾಯಿಲೆ ಇರುವ ಜನರನ್ನು ಹಾಸ್ಯ ಸಂಜೆಗಳಿಗೆ ಆಹ್ವಾನಿಸಬಹುದು ಅಥವಾ ಸ್ನೇಹಿತರು ಮತ್ತು ಕುಟುಂಬದೊಂದಿಗೆ ಮೋಜಿನ ಸಂಜೆಗಳನ್ನು ಆನಂದಿಸಲು ಪ್ರೋತ್ಸಾಹಿಸ ಬಹುದು" ಎಂದು ಅವರು ಹೇಳುತ್ತಾರೆ. ಡಾ. ಆನೆಟ್ ಗುಡ್‌ಹಾರ್ಟ್ ಅವರ ಪುಸ್ತಕ, "ಲಾಫ್ಟರ್ ಥೆರಪಿ" ನಲ್ಲಿ, ಇಡೀ ಅಧ್ಯಾಯವು ನಗುವಿನ ಭೌತಿಕ ಪ್ರಯೋಜನಗಳಿಗೆ ಸಮರ್ಪಿಸಲಾಗಿದೆ, ಏಕೆಂದರೆ ಇದು ದೇಹದಲ್ಲಿನ ಪ್ರತಿಯೊಂದು ಪ್ರಮುಖ ವ್ಯವಸ್ಥೆಯನ್ನು ತೊಡಗಿಸುತ್ತದೆ.

ನಗು ನಮ್ಮ ಮುಖದ ತೇಜಸ್ಸನ್ನು ಹೆಚ್ಚಿಸುತ್ತದೆ ನಗುವಿನಿಂದ ನಾವು ಜನರ ಪ್ರೀತಿ ಪ್ರೇಮವನ್ನು ಹೆಚ್ಚು ಸಂಪಾದಿಸಿಕೊಳ್ಳಬಹುದು. ನಾವು ನಗದೇ ಇದ್ದ ದಿನ ನಷ್ಟವಾದ ದಿನವೇ ಸರಿ. ಪ್ರತಿಯೊಬ್ಬರು ತಮ್ಮ ಸಿಡುಕು ಸ್ವಭಾವವನ್ನು ಕಡಿಮೆ ಮಾಡಿ ಹಾಸ್ಯ ಪ್ರವೃತ್ತಿಯನ್ನು ಬೆಳೆಸಿಕೊಂಡರೆ ಖಂಡಿತವಾಗಿ ತಮ್ಮ ಆರೋಗ್ಯವನ್ನು ಉತ್ತಮಪಡಿಸಬಹುದು. ನಗುವುದೇ ಸ್ವರ್ಗ ಅಳುವುದೇ ನರಕ ಎಂದಿದ್ದಾರೆ ಆದ್ದರಿಂದ ಬಾಳಿನುದ್ದಕ್ಕೂ ನಾವು ನಗುತ್ತಲೇ ಇದ್ದು ನಮ್ಮ ಆರೋಗ್ಯವನ್ನು ವೃದ್ಧಿ ಮಾಡಿಕೊಳ್ಳೋಣ.

ನಗುವು ಸಹಜದ ಧರ್ಮ; ನಗಿಸುವುದು ಪರಧರ್ಮ । ನಗುವ ಕೇಳುತ ನಗುವುದತಿಶಯದ ಧರ್ಮ ॥ ನಗುವ ನಗಿಸುವ ನಗಿಸಿ ನಗುತ ಬಾಳುವ ವರವ । ಮಿಗೆ ನೀನು ಬೇಡಿಕೊಳೊ – ಮಂಕುತಿಮ್ಮ ॥

– **ರೇಷ್ಮಾ ಶೆಟ್ಟಿ** ಉಳ್ತೂರ, ಕುಂದಾಪುರ

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**– ಜಾಹೀರಾತು ವ್ಯವಸ್ಥಾಪಕರು.**

# ಭಾರತೀಯ ಛಲದಂಕ ಮಲ್ಲ ಯೋಗೇಶ್ವರ್



ಯೋಗೇಶ್ವರ್ ದತ್ ಹರಿಯಾಣದ ಸೋನಿಪತ್ ಜಿಲ್ಲೆಯ ಭೈನ್‌ವಾಲ್ ಕಲಾನ್ ಗ್ರಾಮದಲ್ಲಿ 02/11/1982 ರಲ್ಲಿ ಜನಿಸಿದರು.

08ನೇ ವಯಸ್ಸಿನಲ್ಲಿ ಬಾಲರಾಜ್ ಪೈಲ್ವಾನ್ ಇವರ ಮಾರ್ಗದರ್ಶನದಲ್ಲಿ ತಮ್ಮ ಗ್ರಾಮದಲ್ಲಿ ಕುಸ್ತಿಯನ್ನು ಪ್ರಾರಂಭಿಸಿ ಮುಂದೆ ತರಬೇತುದಾರ ರಾಂಫಾಲ್ ಅವರಿಂದ ತರಬೇತಿ ಪಡೆದು ಸಾಧನೆಗೈದ ಭಾರತೀಯ ಫ್ರೀ ಸ್ಟೈಲ್ ಕುಸ್ತಿಪಟುವಾಗಿದ್ದಾರೆ ಒಲಂಪಿಕ್ ಪದಕ ಗೆದ್ದ ಆಯ್ದ ಭಾರತದ ಪುರುಷ ಕುಸ್ತಿ ಕ್ರೀಡಾಪಟುಗಳಲ್ಲಿ ಇವರು ಒಬ್ಬರು.

ಇವರು ಏಷ್ಯನ್ ಗೇಮ್ಸ್‌ಗಾಗಿ ದೋಹಾಗೆ ವಿಮಾನ ಹತ್ತುವ ಕೇವಲ ಒಂಬತ್ತು ದಿನಗಳ ಮೊದಲು 3 ಆಗಸ್ಟ್ 2006 ರಂದು ತಂದೆಯನ್ನು ಕಳೆದುಕೊಂಡರು, ಮೊಣಕಾಲಿನ ಗಾಯವು ಇವರನ್ನು ಕಾಡಿತ್ತು ಆದರೆ ಎಲ್ಲಾ ಭಾವನಾತ್ಮಕ ಮತ್ತು ದೈಹಿಕ ಆಘಾತದ ಹೊರತಾಗಿಯೂ ಅವರು ದೋಹಾದಲ್ಲಿ ನಡೆದ 15ನೇ ಏಷ್ಯನ್ ಗೇಮ್ಸ್‌ನಲ್ಲಿ 60 ಕೆಜಿ ವಿಭಾಗದಲ್ಲಿ ಕಂಚಿನ ಪದಕವನ್ನು ಗೆಲ್ಲುವಲ್ಲಿ ಯಶಸ್ವಿಯಾದರು.

2010 ರ ದೆಹಲಿ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಇವರ ವೃತ್ತಿ ಜೀವನಕ್ಕೆ ಅಪಾಯಕಾರಿಯಾದ ಮೊಣಕಾಲಿನ ಗಾಯವನ್ನು ನಿವಾರಿಸಿ 60 ಕೆಜಿ ವಿಭಾಗದಲ್ಲಿ ಪ್ರಶಸ್ತಿಯನ್ನು ಗೆದ್ದರು.

ಇವರ ಎದುರಾಳಿಗಳಾದ ಆಸ್ಟ್ರೇಲಿಯದ ಫರ್ಜಾದ್ ತಾರಾಶ್(16–0,17–0),ದಕ್ಷಿಣ ಆಫ್ರಿಕಾದ ಮಾರಿಯಸ್ ಲೂಟ್ಸ್ (7–1)ಮತ್ತು ಇಂಗ್ಲೆಂಡ್‌ನ ಸಾಶಾ ಮದ್ಯಾರ್ಚಿಕ್ (4–4, 8–0) ಇವರುಗಳನ್ನು ಮಣಿಸಿ ಫೈನಲ್ ಪ್ರವೇಶ ಪಡೆದಿದ್ದರು.

ಆಗಸ್ಟ್ 12, 2012 ದತ್ ಅವರು 2012 ರ ಲಂಡನ್ ಒಲಿಂಪಿಕ್ಸ್‌ನಲ್ಲಿ ಪುರುಷರ ಫ್ರೀಸ್ಟೈಲ್ 60 ಕೆಜಿ ದೇಹ ತೂಕದ ವಿಭಾಗದಲ್ಲಿ ಸ್ಮರಣೀಯ ಕಂಚು ಪಡೆಯುವ ಮೂಲಕ ಭಾರತಕ್ಕೆ ಪದಕ ತಂದುಕೊಟ್ಟರು.

1952 ರಲ್ಲಿ ಕೆ ಡಿ ಜಾಧವ್ ನಂತರ ಒಲಿಂಪಿಕ್ ಪದಕ ಗೆದ್ದ 03ನೇ ಭಾರತೀಯ ಕುಸ್ತಿಪಟು. ಅವರು ಕಂಚಿನ ಪದಕದ ಪಂದ್ಯದಲ್ಲಿ ಉತ್ತರ ಕೊರಿಯಾದ ರಿ ಜೊಂಗ್-ಮಯೋಂಗ್ ಅವರನ್ನು ಸೋಲಿಸಿದ್ದರು ಈ ಮೂಲಕ ಲಂಡನ್ ಒಲಿಂಪಿಕ್ಸ್ 2012 ರಲ್ಲಿ ಭಾರತೀಯ ತಂಡಕ್ಕೆ ಐದನೇ ಪದಕವನ್ನು ಗೆದ್ದರು. ಇದಕ್ಕೂ ಮೊದಲು ಕಝಾಕಿಸ್ತಾನದ ಅಸ್ತಾನಾದಲ್ಲಿ ನಡೆದ ಏಷ್ಯನ್ ಅರ್ಹತಾ ಪಂದ್ಯಾವಳಿಯಲ್ಲಿ ಬೆಳ್ಳಿ ಪದಕವನ್ನು ಗೆಲ್ಲುವ ಮೂಲಕ 2012 ರ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದರು, ಅಲ್ಲಿ ಅವರು ಫೈನಲ್‌ನಲ್ಲಿ ಇರಾನಿನ ಮಸೌದ್ ಎಸ್ಮೇಲ್‌ಪೋರ್ ಎದುರು (2–3, 0–1) ಸೋತರು.



ಡಾ.ಸುಧಾಕರ ಜಿ.ಲಕ್ಕವಳ್ಳಿ
ಲೇಖಕರು 8747969381

Scan For Digital Colourful
HAMPI TIMES E-paper

ಒಲಿಂಪಿಕ್ಸ್‌ನಲ್ಲಿ ಇವರು ರಷ್ಯಾದ ಬಿ ಕುಡುಖೋವ್‌ಗೆ 1–0, 2–0ರಿಂದ ಸೋತರು ಮತ್ತು ಪ್ರಿ-ಕ್ವಾರ್ಟರ್‌ಫೈನಲ್ ಸುತ್ತಿನಿಂದ ಹೊರಬಿದ್ದರು.

ಕುದುಖೋವ್ ಅವರು ಈವೆಂಟ್‌ನ ಫೈನಲ್‌ಗೆ ತಲುಪಿದ್ದರಿಂದ ಅವರು ರಿಪೆಚೇಜ್ ಸುತ್ತಿನಲ್ಲಿ ಸ್ಪರ್ಧಿಸುವ ಅವಕಾಶವನ್ನು ಪಡೆದರು ಅವರ ಮೊದಲ ರಿಪೆಚೇಜ್ ಸುತ್ತಿನಲ್ಲಿ ಅವರು 1–0, 1–0 ಅಂಕಗಳೊಂದಿಗೆ ಪೋರ್ಟೊ ರಿಕೊದ ಫ್ರಾಂಕ್ಲಿನ್ ಗೊಮೆಜ್ ಅವರನ್ನು ಸೋಲಿಸಿದರು.

ಅವರು ತಮ್ಮ ಎದುರಾಳಿಯ ವಿರುದ್ಧ ಅದೃಷ್ಟವನ್ನು ಪಡೆದರು, ಎರಡೂ ಸಂದರ್ಭಗಳಲ್ಲಿ ಟಾಸ್ ಗೆದ್ದು ಕ್ಲಿಂಚ್ ಸ್ಥಾನವನ್ನು ಗಳಿಸಿದರು. ಯೋಗೇಶ್ವರ್ ನಂತರ 7–5 ಸ್ಕೋರ್ ಗಳಿಸಿ ಮಸೌದ್ ಎಸ್ಮೇಲ್‌ಪೋರ್ ಎಣಿಕೆ ಮಾಡಲಾದ ಪಾಯಿಂಟ್‌ಗಳ ಒಟ್ಟು ಮೊತ್ತದೊಂದಿಗೆ 3–1 ರೆಪೆಚೇಜ್ ರೌಂಡ್ 2 ರಲ್ಲಿ ಎಸ್ಮೇಲ್‌ಪೋರ್ ಆ ವರ್ಷದ ಆರಂಭದಲ್ಲಿ ಏಷ್ಯನ್ ಅರ್ಹತೆಗಳಲ್ಲಿ ಯೋಗೇಶ್ವರ್ ಅವರನ್ನು ಸೋಲಿಸಿದ್ದರು.

ಯೋಗೇಶ್ವರ್ 65 ಕೆಜಿ ಫ್ರೀಸ್ಟೈಲ್ ಕುಸ್ತಿ ವಿಭಾಗದಲ್ಲಿ 2014 ರ ಏಷ್ಯನ್ ಗೇಮ್ಸ್‌ನ ಫೈನಲ್‌ನಲ್ಲಿ ತಜಕಿಸ್ತಾನದ ಝುಲಿಮ್‌ಖಾನ್ ಯೂಸುಪೋವ್ ಅವರನ್ನು ಸೋಲಿಸುವ ಮೂಲಕ ಚಿನ್ನವನ್ನು1–0 ಅಂಕಗಳೊಂದಿಗೆ ಗೆದ್ದರು. ಇದಕ್ಕೂ ಮೊದಲು ಅವರು ಚೀನಾದ ಎದುರಾಳಿಯನ್ನು ಸೆಮಿ-ಫೈನಲ್‌ನಲ್ಲಿ ಫಾಲ್ ಮೂಲಕ ಮತ್ತೊಂದು ನಿಕಟ ಹೋರಾಟದಲ್ಲಿ ಸೋಲಿಸಿದರು,ಇದರಲ್ಲಿ ದತ್ ಬಹುತೇಕ ಕೊನೆಯವರೆಗೂ ಹಿಂದುಳಿದಿದ್ದರು.ಅವರು ಕ್ವಾರ್ಟರ್‌ಫೈನಲ್‌ನಲ್ಲಿ ಉತ್ತರ ಕೊರಿಯಾದ ಜಿನ್ಹೊಕ್ ಕಾಂಗ್ ಅವರನ್ನು ಸೋಲಿಸಿದರು.

ಇದಲ್ಲದೆ ಯೋಗೇಶ್ವರ್ ದತ್ ರವರು ಪ್ರೊ ಕುಸ್ತಿ ಪಂದ್ಯಾವಳಿಗಳಲ್ಲಿ ಭಾಗವಹಿಸಿದ್ದಾರೆ. ಇವರ ಈ ಎಲ್ಲಾ ಸಾಧನೆಗಳನ್ನು ಪರಿಗಣಿಸಿ 2013 ರಲ್ಲಿ ಭಾರತ ಸರ್ಕಾರದಿಂದ ಪದ್ಮಶ್ರೀ ಪ್ರಶಸ್ತಿ, 2012ರಲ್ಲಿ ರಾಜೀವ್ ಗಾಂಧಿ ಖೇಲ್ ರತ್ನ ಪ್ರಶಸ್ತಿ, ಹರಿಯಾಣ ಸರ್ಕಾರದಿಂದ ರಾಜ್ಯ ಪ್ರಶಸ್ತಿ ಹಾಗೂ ನಗುದು ಬಹುಮಾನ ನೀಡಿ ಗೌರವಿಸಿರುತ್ತಾರೆ.



ಎಷ್ಟೇ ತೊಂದರೆಗಳಿದ್ದರೂ, ಬಡತನವಿದ್ದರೂ ಗೆದ್ದೇ ಗೆಲ್ಲಬೇಕೆಂಬ ಛಲವನ್ನು ಕೆಲವೊಂದು ಕ್ರೀಡಾಪಟುಗಳು ಮಾತ್ರ ಅಳವಡಿಸಿ ಕೊಂಡಿರುತ್ತಾರೆ ಏಕೆಂದರೆ ಸಿಕ್ಕ ಅವಕಾಶ ಬಳಸಿಕೊಳ್ಳದೆ ಹೋದರೆ ಮತ್ತದೇ ಅವಕಾಶ ಸಿಗಬಹುದು ಕಳೆದುಕೊಳ್ಳಬಹುದು ಸಿಕ್ಕರೆ ಯಶಸ್ವಿಯಾಗಲು ಸಾಕಷ್ಟು ವರ್ಷಗಳು ದಣಿಯಬೇಕಾಗುತ್ತದೆ ಅಂತಹ ಅವಕಾಶವನ್ನು ಬಳಸಿಕೊಂಡು ದೇಶಕ್ಕೆ ಕೀರ್ತಿ ತಂದ ಕ್ರೀಡಾಪಟು ಕುಸ್ತಿ ಪೈಲ್ವಾನ್ ಯೋಗೇಶ್ವರ್.

# ಕೋತಿಯ ಮಾನವೀಯತೆ ಕಂಡು ದಂಗಾದ ಅರಸ

ಒಂದಾನೊಂದು ಕಾಡು. ಆ ಕಾಡಿನ ಪಕ್ಕದಲ್ಲಿ ನದಿ ಹರಿಯುತ್ತಿತ್ತು. ಆ ನದಿ ಈಚೆಗೆ ದೊಡ್ಡ ಮಾವಿನ ಮರವಿತ್ತು.



ಹಣ್ಣಿನ ಋತುವಿನಲ್ಲಿ ರಸಭರಿತ ಮಾವಿನ ಹಣ್ಣುಗಳು ಇರ್ತಾ ಇದ್ದವು. ಆ ಮರದ ಸುತ್ತಲಿನ ಪ್ರದೇಶದಲ್ಲಿ ಮಂಗಗಳ ದೊಡ್ಡ ಹಿಂಡು ವಾಸ ವಾಗಿತ್ತು. ಆ ಹಿಂಡಿಗೆ ಬೃಹತ್ ಗಾತ್ರದ ಗಡವ ಕೋತಿ ರಾಜನಾಗಿತ್ತು. ತನ್ನ ಪ್ರಜೆಗಳನ್ನುಅದುಪ್ರೀತಿಯಿಂದನೋಡಿಕೊಳ್ಳುತ್ತಿತ್ತು. ಮರಿ ಮಂಗ, ಹಿರಿ ಮಂಗಗಳ ಸಹಿತ ಎಲ್ಲರ ಕಾಳಜಿ ಮಾಡುತ್ತಿತ್ತು.

ನದಿಯ ಅಂಚಿಗಿದ್ದ ಮಾವಿನ ಮರದಿಂದ ಒಂದು ಹಣ್ಣು ನದಿಗೆ ಬೀಳದಂತೆ ಎಚ್ಚರಿಕೆ ವಹಿಸಬೇಕೆಂದು ಅದು ತನ್ನ ಪ್ರಜೆಗಳಿಗೆ ಪದೇ ಪದೇ ಹೇಳುತ್ತಿತ್ತು. ನದಿ ನೀರಿಗೆ ಹಣ್ಣು ಬಿದ್ದರೇನು ಸಮಸ್ಯೆ ಎಂದರೆ, ಆ ಹಣ್ಣು ನೀರಿನಲ್ಲಿ ತೇಲಿಕೊಂಡು ಹೋಗಿ ಯಾವುದಾದರೂ ಊರು ತಲುಪುತ್ತದೆ. ಆಗ ಮನುಷ್ಯರ ಕೈ ಸೇರುತ್ತದೆ. ಆ ಹಣ್ಣನು ಹುಡುಕಿಕೊಂಡು ಅವರು ಕಾಡಿಗೆ ಬರುತ್ತಾರೆ. ಆಗ ಕಾಡಿನಲ್ಲಿರುವ ಪ್ರಾಣಿಗಳಿಗೆ ಉಳಿಗಾಲವಿಲ್ಲ ದಂತಾಗುತ್ತದೆ. ಇದು ಕಪಿ ರಾಜನ ನಿಲುವಾಗಿತ್ತು. ಹಾಗಾಗಿ ಹಣ್ಣು ನೀರಿಗೆ ಬೀಳದಂತೆ ಎಲ್ಲಾ ಕಪಿಗಳು ಎಚ್ಚರಿಕೆ ವಹಿಸಿದವು.

ಒಮ್ಮೆ ಜೋರು ಮಳೆ ಬಂತು. ಮಳೆಯ ಜೊತೆಗೆ ಗಾಳಿಯ ಆರ್ಭಟವೂ ಇತ್ತು. ಅದು ಮಾವಿನಹಣ್ಣಿನ ಕಾಲವು ಆಗಿದ್ದರಿಂದ ಗಾಳಿಯ ರಭಸಕ್ಕೆ ನಾಲ್ಕಾರು ಹಣ್ಣುಗಳು ನದಿ ನೀರಿನಲ್ಲಿ ಕೊಚ್ಚಿ ಹೋದವು. ಹಾಗೆ ಹೋದ ಹಣ್ಣುಗಳಲ್ಲಿ ಒಂದೆರಡು ಹಣ್ಣುಗಳು ನದಿಯಾಚೆ ದಡ ತಲುಪಿದವು. ಆಚೆ ದಡದಲ್ಲಿ ಬಟ್ಟೆ ತೊಳೆಯುತ್ತಿದ್ದ ಅಗಸನೊಬ್ಬನಿಗೆ ಒಂದು ಹಣ್ಣು ಸಿಕ್ಕಿತು. ನೋಡುವುದಕ್ಕೆ ಕೆಂಪಗೆ ಆಕರ್ಷವಾಗಿತ್ತು. ಅಗಸ ಈ ಹಣ್ಣನ್ನು ತಾನು ತಿನ್ನದೆ ಊರಿನ ರಾಜನಿಗೆ ಕಾಣಿಕೆಯಾಗಿ ನೀಡಿದ. ಆ ಹಣ್ಣನ್ನು ಸವಿದ ರಾಜನಿಗೆ ಇಂತಹ ಅದ್ಭುತವಾದ ಮಾವು ಇನ್ನುಷ್ಟು ಬೇಕಿನಿಸಿತು. ಅಗಸನನ್ನು ಕರೆಸಿ ಕೇಳಿದಾಗ, ತನಗದು ನದಿಯ ದಡದಲ್ಲಿ ಸಿಕ್ಕಿದ್ದಾಗಿ ತಿಳಿಸಿದ. ಹಾಗಾದರೆ ನದಿಯ ಅಂಚಿನಲ್ಲಿ ಎಲ್ಲೋ ಈ ಹಣ್ಣಿನ ಮರ ಇರಬೇಕೆಂದು ತರ್ಕಿಸಿದ ರಾಜ, ತನ್ನ ಭಟರನ್ನು ಹುಡುಕಲು ಕಳಿಸಿದ.

ಆದರೆ ಅಷ್ಟು ಸಿಹಿಯಾದ ಮಾವಿನ ಹಣ್ಣಿನ ಮರ ಕಾಣಲಿಲ್ಲ. ಹಾಗಾದರೆ ಇನ್ನೊಂದು ದಡದಲ್ಲಿ ಇರಬೇಕೆಂದು ತರ್ಕಿಸಿದ ರಾಜ, ತನ್ನ ಭಟ್ಟರು ಮತ್ತು ಈಜುಗಾರರ ಪಡೆಯೊಂದಿಗೆ ತಾನೇ ಹೊರಟ. ಎರಡು ದೊಡ್ಡ ದೋಣಿಗಳಲ್ಲಿ ಮನುಷ್ಯರು ನದಿ ದಾಟಿ ತಮ್ಮ ಕಾಡಿನತ್ತ ಬರುವುದು ಕಪಿಗಳಿಗೆ ಕಾಣಿಸಿತು. ಇದನ್ನು ಕಂಡು ಆತಂಕಗೊಂಡ ವಾನರರು, ತಮ್ಮ ರಾಜನಿಗೆ ವಿಷಯ ತಿಳಿಸಿದರು. ಅವರು ಮಾವಿನ ಮರವನ್ನೇ ಹುಡುಕುತ್ತಿರಬಹುದು ಎಂದು ಅಂದಾಜಿಸಿದ ಕಪಿರಾಜ. ಎಲ್ಲಾ ಮಂಗಗಳನ್ನು ನದಿಯಾಚೆಯ ಕಾಡಿಗೆ ಸಾಗಿಸಲು ತೀರ್ಮಾನಿಸಿದ. ಚುರುಕಾಗಿ ಒಂದಿಷ್ಟು ಬಳ್ಳಿಗಳನ್ನು ತಂದು, ಒಂದಕ್ಕೊಂದು ಬಿಗಿದು ಹಗ್ಗವನ್ನಾಗಿ ಮಾಡಿ. ಹೊಳೆಯ ಮರದ ರಂಬೆಗೆ ಬಿಗಿದ. ಈ ದಡದಲಿದ್ದ ಒಂದೊಂದೆ ಕಪಿಗಳನ್ನು ಆ ಬಳ್ಳಿ ಹಗ್ಗದ ಮೂಲಕ ಆಚೆ ದಡಕ್ಕೆ ರವಾನಿಸಲಾಯಿತು. ಕಪಿರಾಜ ತಾನೇ ಉಸ್ತುವಾರಿ ವಹಿಸಿ ಓಡಾಡುತ್ತಿದ್ದ. ಮರಿಕಪಿ, ಹಿರಿಕಪಿಗಳನ್ನು ಅತ್ಯಂತ ಜಾಗ್ರತೆಯಿಂದ ಸಾಗಿಸಲಾಯಿತು.

ದೋಣಿಯಲ್ಲಿ ನದಿ ದಾಟುತ್ತಿದ್ದ ಅರಸನು ಮಂಗಗಳ ಹಗ್ಗದ ನಡಿಗೆಯನ್ನು ಗಮನಿಸಿದ. ಇಂಥದೊಂದು ವಿಚಿತ್ರವನ್ನು ಆತ ಹಿಂದೆಂದೂ ಕಂಡಿರಲಿಲ್ಲ. ಕಪಿಗಳು ಹೀಗೇಕೆ ಮಾಡುತ್ತಿವೆ ಎಂಬುದು ಅಲ್ಲಿದ್ದ ಯಾರಿಗೂ ಅರ್ಥವಾಗದೆ ಈ ವಿದ್ಯಮಾನವನ್ನೇ ಗಮನಿಸತೊಡಗಿದರು. ದೊಡ್ಡ ಗಾತ್ರದ ಗಡವ ಕೋತಿಯೊಂದು ಎಲ್ಲರನ್ನೂ ಸಂಭಾಳಿಸುತ್ತಿದೆ ಎನ್ನುವುದು ಅವರ ಕಣ್ಣಿಗೆ ಬಿತ್ತು. ಅದು ಆ ಹಿಂಡಿನ ನಾಯಕನಿರಬೇಕು ಎಂದು ರಾಜ ತೀರ್ಮಾನಿಸಿದ. ಎಲ್ಲಾ ಕಪಿಗಳು ಆಚೆ ದಡ ದಾಟುತ್ತಿದವು. ಕಪಿರಾಜನ ಹೊರತಾಗಿ ಅಷ್ಟರಲ್ಲಾಗಲೇ ನೂರಾರು ಕಪಿಗಳು ದಾಟಿದ್ದರಿಂದ ಬಳ್ಳಿಯ ಹಗ್ಗ ಬಲ ಕಳೆದುಕೊಂಡಿತ್ತು. ಜೊತೆಗೆ ಕಪಿರಾಜನ ಗಾತ್ರವು ದೊಡ್ಡದಾಗಿದ್ದರಿಂದ ಬಳ್ಳಿಯ ಆಧಾರದಿಂದ ನದಿ ದಾಟುತ್ತಿರುವಾಗಲೇ ಆ ಹಗ್ಗ ಹರಿದು ಬಿತ್ತು. ಕಪಿರಾಜ ನೀರಿಗೆ ಬಿದ್ದ.

ಇದನ್ನೆಲ್ಲಾ ನೋಡುತ್ತಿದ್ದ. ಅರಸ, ಕೋತಿಯನ್ನು ರಕ್ಷಿಸುವಂತೆ ತನ್ನ ಈಜುಗಾರರಿಗೆ ಆದೇಶಿಸಿದ. ಕಪಿರಾಜನ ಜೀವ ಉಳಿಯಿತು. 'ಕೋತಿಯೇ, ನಿನ್ನ ಸಹವಾಸವನ್ನು ಬಹಳ ಹೊತ್ತಿನಿಂದ ಗಮನಿಸುತ್ತಿದ್ದೆ. ಎಲ್ಲರನ್ನು ರಕ್ಷಿಸಿ ಕಡೆಯದಾಗಿ ನಿನ್ನ ಸುರಕ್ಷೆಯ ಬಗ್ಗೆ ನೀನು ಗಮನ ನೀಡಿದ್ದು ನನಗೆ ಮೆಚ್ಚುಗೆಯಾಗಿದೆ. ದಣಿದಂತಹ ನೀನು ಕೆಲವು ದಿನಗಳು ನಮ್ಮ ಅರಮನೆಯಲ್ಲಿ ವಿಶ್ರಮಿಸಬಹುದು' ಎಂದು ಹೇಳಿದ ಅರಸ. "ಅರಸನೆ, ನಿನ್ನ ಮೆಚ್ಚುಗೆಗೆ ನಾನು ಆಬಾರಿ. ನನ್ನ ಪ್ರಜೆಗಳ ಸುರಕ್ಷತೆಯ ಬಗ್ಗೆ ಗಮನ ನೀಡುವುದು ರಾಜನಾಗಿ ನನಗೆ ಕರ್ತವ್ಯ. ಅದನ್ನೇ ಮಾಡಿದ್ದೇನಷ್ಟೇ. ನಿನ್ನ ಅರಮನೆಗೆ ಆಹ್ವಾನಿಸಿದ್ದಕ್ಕೆ ಧನ್ಯವಾದಗಳು. ಆದರೆ ನನ್ನವರನ್ನು ಬಿಟ್ಟು ನಾನು ಬರಲಾರೆ. ಅವರ ಯೋಗಕ್ಷೇಮ ಹೊರತಾಗಿ ನನಗೆ ಬೇರೆ ಧ್ಯಾನವಿಲ್ಲ" ಎನ್ನುವ ಮಾತುಗಳು ಕಪಿರಾಜ ಬಾಯಿಯಿಂದ ಬಂದವು. 'ಆದರೆ ನೀವೆಲ್ಲ ಇನ್ನೊಂದು ದಡಕ್ಕೆ ಹೋಗುತ್ತಿರುವುದೇಕೆ?' ಕೇಳಿದ ಅರಸ. 'ಮಾನವರು ಬಂದಲೆಲ್ಲ ಪ್ರಾಣಿಗಳ ಶಾಂತಿ ಕದಡುವುದು ಸಾಮಾನ್ಯ. ಹಾಗಾಗಿ ನನ್ನ ಹಿಂಡಿನ ಶಾಂತಿ, ನೆಮ್ಮದಿಗೆ ಭಂಗ ಬಾರದಿರಲೆಂದು ಈ ಕೆಲಸ ಮಾಡಬೇಕಾಯಿತು' ಎಂದಿತು ಕೋತಿ. "ಆಕೃತಿಯಲ್ಲಿ ವಾನರರಾದ ನಿನ್ನಿಂದ ಕಲಿಯುವುದು ಬಹಳಷ್ಟಿದೆ. ಕಾಡಿನ ಜಾಗದಲ್ಲಿದ್ದ ಮಾವಿನ ಹಣ್ಣಿನ ಆಸೆಗೆ ಬಂದವನೆ ಹೊರತು ನಿಮ್ಮ ನೆಮ್ಮದಿ ಹಾಳು ಮಾಡುವ ಉದ್ದೇಶವಿಲ್ಲ. ಆದರೆ ಅದು ನಿಮ್ಮ ಜಾಗ ಅದರಲ್ಲಿರುವುದನ್ನು ನಿಮ್ಮಿಂದ ಕಸಿಯುವುದು ಸರಿಯಲ್ಲ. ಹಾಗಾಗಿ ನಿಮ್ಮ ಜಾಗ ನಿಮಗೆ ಇರಲಿ" ಎನ್ನುತ್ತಾ ರಾಜ ಮರಳಿ ಹೊರಡಲು ಅನುವಾದ. 'ಒಂದು ಕ್ಷಣ ನಿಲ್ಲಿ!' ಎನ್ನುತ್ತಾ ಕಪಿರಾಜ ಮಾವಿನ ಮರದತ್ತ ಜಿಗಿಯಿತು. ಅಲ್ಲಿಂದ ಮರಳಿ ಬರುವಾಗ ಒಂದಿಷ್ಟು ರುಚಿಯಾದ ಮಾವಿನ ಹಣ್ಣುಗಳನ್ನು ತಂದು ರಾಜನಿಗೆ ಒಪ್ಪಿಸಿತು. ರಾಜ ಸಂತೋಷದಿಂದ ಮರಳಿ ಹೋದ. ರಾಜನಿಗೆ ಹಣ್ಣು ಸಿಕ್ಕಿತು. ಮಂಗಗಳಿಗೆ ನೆಮ್ಮದಿಯು ಉಳಿಯಿತು.




– **ಯು. ಪೂಜಾ.** **9ನೇ ತರಗತಿ. ಸರ್ಕಾರಿ ಪ್ರೌಢಶಾಲೆ ಬಸರಕೋಡು. ಹ.ಬೊ.ಹಳ್ಳಿ(ತಾ).**

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

# ಮತ್ತೆ ಒಳಿತಿನತ್ತ... ಹಿಮ್ಮುಖ ಪಯಣ

ಈ ಜಗತ್ತಿನಲ್ಲಿ ಬದಲಾವಣೆಯೊಂದೇ ನಿರಂತರವಾಗಿ ರುವುದು. ಈ ಹಿಂದೆ ಕಾಲನಡಿಗೆಯಲ್ಲಿ ಮೈಲಿಗಟ್ಟಲೆ ನಡೆಯುತ್ತಿದ್ದ ಜನ ಸಾಕುಪ್ರಾಣಿಗಳನ್ನು ಬಳಸಲು ಆರಂಭಿಸಿ, ಮುಂದೆ ಎತ್ತಿನ ಗಾಡಿ ಕುದುರೆ ರಥ ಸಾರೋಟುಗಳ ಸವಾರಿ ಮಾಡಿದರೆ ಕಳೆದ ಶತಮಾನದಲ್ಲಿ ದ್ವಿಚಕ್ರ, ತ್ರಿಚಕ್ರ ಮತ್ತು ನಾಲ್ಕು ಚಕ್ರದ ವಾಹನಗಳು ಬಂದವು. ಇದೀಗ ಜೆಟ್ ವೇಗದಲ್ಲಿ ಓಡಾಡುವ ಖಂಡಗಳನ್ನು ಸುತ್ತುವ ಸೂಪರ್ ಸಾನಿಕ್ ವೇಗದ ವಿಮಾನಗಳು, ರೈಲುಗಳು, ಜಲಾಂತರ್ಗಾಮಿ ವಾಹನಗಳು ಬಳಕೆಯಲ್ಲಿದ್ದು ಎಲ್ಲರಿಗೂ ಸುಲಭ ಲಭ್ಯವಾಗುತ್ತಿದೆ. ಕೇವಲ ಖಂಡಗಳನ್ನಷ್ಟೇ ಅಲ್ಲ, ಕೆಲವೇ ದಶಕಗಳ ಹಿಂದೆ ಚಂದ್ರನ ಮೇಲೆ ಕಾಲಿಟ್ಟ ಮನುಷ್ಯ ಇದೀಗ ಮಂಗಳನ ಅಂಗಳಕ್ಕೆ ಪಯಣ ಸಾಗಿಸಿದ್ದಾನೆ.

ಮನುಷ್ಯ ಜೀವನವೂ ಅಷ್ಟೇ... ದಿನಬಳಕೆಯ ವಸ್ತುಗಳಾದ ತಾಮ್ರ ಹಿತ್ತಾಳೆ ಕಂಚಿನ ಪಾತ್ರೆಗಳು ಕೆಲವರ ಮನೆಗಳಲ್ಲಿ ಅಟ್ಟ ಸೇರಿದ್ದರೆ, ಮತ್ತೆ ಕೆಲವರು ಪಾತ್ರೆ ಅಂಗಡಿಗೆ ಹಾಕಿ ತಮಗೆ ಬೇಕಾದ ಪಳಪಳಿಸುವ ಸ್ಟೀಲ್ ಪಾತ್ರೆಗಳನ್ನು ಕೊಂಡಿದ್ದಾರೆ, ಮನೆಯಲ್ಲಿ ಸ್ಥಳಾವಕಾಶ ಇರುವ ಸೌಂದರ್ಯ ಪ್ರಜ್ಞೆಯನ್ನು ಹೊಂದಿದ ಉಳಿದ ಜನ ಅವುಗಳನ್ನು ಅಲಂಕಾರಿಕ ವಸ್ತುಗಳಾಗಿ ಬಳಸಿದ್ದಾರೆ. ಈ ಹಿಂದೆ ಮನೆಯಲ್ಲಿ ಮಣ್ಣಿನ ಒಲೆಗಳು, ಗಚ್ಚಿನ ಹೊದಿಕೆ ಹಾಕಿದ ಒಲೆಗಳನ್ನು ಅಡುಗೆಗೆ, ನೀರು ಕಾಯಿಸಲು ಬಳಸಿದರು. ಇದೀಗ ಒಲೆಗಳು, ಸೀಮೆಎಣ್ಣೆ ಸ್ಟೋವ್, ಕರೆಂಟಿನ ಸ್ಟೋವ್ಗಳು ಕಣ್ಮರೆಯಾಗಿ ಗ್ಯಾಸ್ ಸ್ಟವ್ಗಳ ಅನೇಕ ವಿಧಗಳು ಲಭ್ಯವಾಗುತ್ತಿದ್ದು ಬಹುತೇಕ ಅವೇ ಬಳಕೆಯಲ್ಲಿವೆ... ಮತ್ತೆ ಕೆಲವರು ಮೈಕ್ರೋವೇವ್ ಓವನ್, ಓಟಿಜಿ, ಎಲೆಕ್ಟ್ರಿಕ್ ಓವನ್ಗಳನ್ನು ಅಡಿಗೆಗೆ ಬಳಸಿದರೆ ನೀರು ಕಾಯಿಸಲು ಈ ಹಿಂದೆ ಇರುತ್ತಿದ್ದ ಇಜ್ಜಲು ಒಲೆ, ಬತ್ತದ ಹೊಟ್ಟನ್ನು ತುಂಬಿ ಬಳಸುತ್ತಿದ್ದ ಒಲೆ, ಬಚ್ಚಲಿನಲ್ಲಿ ಹುಗಿದ ಹಂಡೆಯ ಒಲೆಗಳೆಲ್ಲ ಮಾಯವಾಗಿ ನಡುವೆ ಕೊಳವೆಯನ್ನು ಹೊಂದಿದ ಬಾಯ್ಲರ್ ನಂತಹ ನೀರು ಕಾಯಿಸುವ ಒಲೆಗಳನ್ನು ಕೂಡ ನಾವು ನೋಡಿದ್ದೇವೆ.ಇದೀಗ ಎಲೆಕ್ಟ್ರಿಕ್ ಗೀಸರ್, ಗ್ಯಾಸ್ ಗೀಜರ್ಗಳ ಕಾಲ. ಇನ್ನೂ ಹೇಳಬೇಕೆಂದರೆ ಇನ್ಸ್ಟಾಂಟ್ ಗೀಜರ್ಗಳ ಕಾಲ.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಈ ಹಿಂದೆ ಕೆಲವೇ ಕೆಲವು ಬಾಣಲಿ, ತಪ್ಪಲೆ, ಗುಂಡಿ ಮತ್ತು ಅಲ್ಯುಮಿನಿಯಂ ಪಾತ್ರೆಗಳ ಜೊತೆ ಜೀವನ ಸಾಗಿಸುತ್ತಿದ್ದ ಹಸಿ ಸೌದೆ ಒಲೆಯಲ್ಲಿ ಊದುಗೊಳವೆಯಿಂದ ಉರಿಯನ್ನು ಹೆಚ್ಚಿಸುತ್ತ, ಕಟ್ಟಿಗೆ ಒಲೆಯ ಹೊಗೆಯಿಂದ ಉಂಟಾಗುವ ಕಣ್ಣುರಿಗೆ ಸೆರಗಿನಿಂದ ಮುಖ ಒರೆಸಿಕೊಂಡು, ಬರುತ್ತಿರುವ ಕೆಮ್ಮನ್ನು ಬಾಯಿಗೆ ಸೀರೆಯ ಸೆರಗನ್ನು ಅಡ್ಡ ಹಿಡಿದು ಅಡುಗೆ ಮಾಡುತ್ತಿದ್ದ ತಾಯಂದಿರು ಇದೀಗ ಅದ್ಯಾವ ಜನಗಳಿಲ್ಲದೆ ಅಡುಗೆ ಮಾಡುತ್ತಿದ್ದು ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದಾರೆ. ದಿನಸಿ ಅಂಗಡಿಯಲ್ಲಿ ಸಿಗುತ್ತಿದ್ದ ಡಬ್ಬಗಳನ್ನೇ ತಂದು ಅವುಗಳು ಖಾಲಿಯಾದ ಮೇಲೆ ದಿನಸಿ ಸಾಮಾನುಗಳನ್ನು ತುಂಬಿಡಲು ಬಳಸುತ್ತಿ ದ್ದರೆ ಮತ್ತೆ ಕೆಲವೊಮ್ಮೆ ಅಂಗಡಿಯಾತನನ್ನು ಕಾಡಿಬೇಡಿ ಆತನ ಅಂಗಡಿಯಲ್ಲಿ ಖಾಲಿಯಾದ ಡಬ್ಬಗಳನ್ನು ತಂದು ಸಾಮಾನುಗಳನ್ನು ಹಾಕಿಡುತ್ತಿದ್ದ ಹೆಣ್ಣು ಮಕ್ಕಳು ಇದೀಗ ಸುಸಜ್ಜಿತವಾದ ಕಿಚನ್ ನಲ್ಲಿ ಬಣ್ಣ ಬಣ್ಣದ ಪರ್ಲ್ ಪೆಟ್, ಟಪ್ಪರ್ ವೇರ್ ಪ್ಲಾಸ್ಟಿಕ್ ಡಬ್ಬಗಳನ್ನು, ಮಿರಿ ಮಿರಿ ಮಿಂಚುವ ಸ್ಟೀಲ್ ಮತ್ತು ಹೊಳೆಯುವ ಗಾಜಿನ ವಿಧವಿಧ ಬಾಟಲಿಗಳನ್ನು ಬಳಸುತ್ತಿದ್ದು ಅಡುಗೆ ಮನೆ ಒಂದು ಪುಟ್ಟ ಆಫೀಸಿನಂತೆ ಭಾಸವಾದರೆ ಅಚ್ಚರಿಯಿಲ್ಲ.

ಮೊದಲು ಮಣ್ಣಿನ ಪಾತ್ರೆ ಬಳಸುತ್ತಿದ್ದ ಜನರು ನಾಗರೀಕತೆ ಬೆಳೆದಂತೆ ಹಿತ್ತಾಳೆ ತಾಮ್ರದ ಪಾತ್ರೆಗಳಿಂದ ಅಲ್ಯೂಮಿನಿ ಯಂ ನಂತರ ಸ್ಟೀಲ್ ಗೆ ಇದೀಗ ಮತ್ತೆ ಮರಳಿ ಮಣ್ಣಿನ ಪಾತ್ರೆಗಳತ್ತ ಹೊರಳುತ್ತಿದ್ದಾರೆ ಎಂಬುದು ಕಾಲಚಕ್ರದ ಮಹಿಮೆ ಅಲ್ಲವೇ! ಈ ಹಿಂದಿನ ತಾಮ್ರ ಹಿತ್ತಾಳೆ ಕಂಚಿನ ಪಾತ್ರೆಗಳು ಅಲಂಕಾರಿಕ ಸಾಮಗ್ರಿಗಳಾಗಿ ಬಳಸಲ್ಪಡುತ್ತಿ ರುವುದು ವಿಶೇಷ.

ಈ ಹಿಂದೆ ವರ್ಷಕ್ಕೊಮ್ಮೆ ಯುಗಾದಿ ಇಲ್ಲವೇ ದೀಪಾವಳಿ ಹಬ್ಬಕ್ಕೆ ಒಂದೆರಡು ಜೊತೆ ಬಟ್ಟೆ ಖರೀದಿಸಿದರೆ ಅದೇ ದೊಡ್ಡ ಸಂಭ್ರಮ. ಮತ್ತೆ ಕೆಲವರಿಗೆ ಕುಂಡೆಯ ಮೇಲೊಂದು ಬಂಡೆಯ ಮೇಲೆ ಒಂದು ಬಟ್ಟೆ ಎನ್ನುವಂತೆ ಜೀವನ. ಆದರೆ ಇಂದು ಮಾಲ್‌ಗೆ ಹೋಗಿ ಬೇಕಾಗಲಿ, ಬೇಡವಾಗಲಿ ಕಣ್ಣಿಗೆ ಕಂಡ ಅಂದವಾದ ಎಲ್ಲವನ್ನು ಖರೀದಿಸಿ ಮನೆಯಲ್ಲಿ ತಂದು ತುರುಕುವ ಸಂಭ್ರಮ. ಮನೆಯ ವಾರ್ಡ್ರೋಬ್, ಕಬ್ಬಿಣದ ಅಲಮಾರಿ ಗಳಲ್ಲಿ ಬಟ್ಟೆ ತುಂಬಿ ತುಳುಕುತ್ತಿದ್ದರೂ ಯಾವುದಾದರೂ ಸಮಾರಂಭಕ್ಕೆ ಹೋಗುವಾಗ ಯಾವುದನ್ನು ಉಡಬೇಕು? ಏನನ್ನು ತೊಡಬೇಕು?



ಎಂದು ಯೋಚಿಸಿ ಕೊನೆಗೆ ಹೇಳುವುದು... ಅಯ್ಯೋ! ನನ್ ಹತ್ರ ಉಟ್ಕೊಳ್ಳೋಕೆ ಬಟ್ಟೆನೇ ಇಲ್ಲ ಅಂತ. ಅವರ ಮಾತು ಕೇಳಿ ಅಲಮಾರದಿಂದ ಬೀಳುತ್ತಿರುವ ಬಟ್ಟೆಗಳಿಗೆ ಬಾಯಿಯೇನಾದರೂ ಇದ್ದಿದ್ದರೆ ಗಹಗಹಿಸಿ ನಕ್ಕು ಬಿಡುತ್ತಿದ್ದವೇನೋ? ಕೆಲ ಜನರು ಮಾತ್ರ ಮಿನಿಮಲಿಸಂ ಗೆ ಮೊರೆ ಹೋಗಿ ಮತ್ತೆ ಕೆಲವೇ ಬಟ್ಟೆಗಳಿಗೆ ಕೆಲವೇ ಜೀವನಾವಶ್ಯಕ ವಸ್ತುಗಳೊಂದಿಗೆ ಜೀವನ ಸಾಗಿಸುತ್ತಿರುವುದು ಸ್ವಾಗತಾರ್ಹ.

ಅಂದು ರುಜು ಹಾಕಬೇಕಾದರೆ ಹೆಬ್ಬಟ್ಟನ್ನು ಒತ್ತುತ್ತಿದ್ದ ಜನ ಇಂದು ಸಾಕ್ಷರರಾಗಿದ್ದಾರೆ ನಿಜ ಆದರೆ ಸ್ಕ್ಯಾನ್ ಮಾಡಲು, ಕಚೇರಿ ಮತ್ತಿತರ ಔದ್ಯೋಗಿಕ ಸ್ಥಳಗಳಲ್ಲಿ ಒಳ ಪ್ರವೇಶಿಸಲು ಹೆಬ್ಬಟ್ಟನ್ನು ಬಳಸುವುದು ಸರ್ವೆಸಾಮಾನ್ಯ ವಾಗಿದೆ.ಆಧಾರ್ ಕಾರ್ಡ್, ರೇಷನ್ ಕಾರ್ಡ್ ಬಳಸುವ ಹಲವೆಡೆ ನಮ್ಮ ಹೆಬ್ಬೆಟ್ಟಿನ ಗುರುತು ಪಡೆಯುವುದು ಸಾಮಾನ್ಯವಾಗಿದೆ.. ಈ ಹಿಂದೆ ಹತ್ತಿಯಿಂದ ನೂಲನ್ನು ತೆಗೆದು ಆ ನೂಲಿನಿಂದ ಬಟ್ಟೆಗಳನ್ನು ತಯಾರಿಸಿ ನಮ್ಮ ಪೂರ್ವಜರು ಧರಿಸುತ್ತಿದ್ದರು. ನಂತರ ಹತ್ತಿಯ ಬಟ್ಟೆಗಳು ಬೇಗನೆ ಸವೆಯುತ್ತವೆ, ಹರಿದು ಹೋಗುತ್ತದೆ ಎಂಬ ಕಾರಣಕ್ಕೆ ಪಾಲಿಯೆಸ್ಟರ್, ಟೆರಿಲಿನ್, ರೇಯಾನ್ ಮುಂತಾದ ಹಲವಾರು ವಿಧದ ಬಟ್ಟೆಗಳು ಮಾರುಕಟ್ಟೆಯಲ್ಲಿ ಲಭ್ಯವಿದ್ದರೂ ಇದೀಗ ಮತ್ತೆ ನಮ್ಮ ಸುತ್ತಣ ವಾತಾವರಣ ಮತ್ತು ಕಾಟನ್ ಬಟ್ಟೆಗಳ ಬಳಕೆಯಿಂದ ದೇಹಕ್ಕೆ ಉಂಟಾಗುವ ಆರಾಮದಾಯಕ ಅನುಭವಗಳಿಂದ ಜನರು ಮತ್ತೆ ಹತ್ತಿ ಬಟ್ಟೆಗಳನ್ನು ಧರಿಸಲು ಮುಂದಾಗಿದ್ದಾರೆ.

ರೈತಾಪಿ ಕೆಲಸಗಳು ಮತ್ತು ಅದಕ್ಕೆ ಸಂಬಂಧಪಟ್ಟ ಗುಡಿ ಕೈಗಾರಿಕೆಗಳು ಶ್ರಮದಾಯಕ ಮತ್ತು ಅನಾಕರ್ಷಕ ಎಂಬ ಕಾರಣದಿಂದ ಅವುಗಳನ್ನು ದೂರವಿಟ್ಟು ಓದಿ ವೈದ್ಯಕೀಯ, ಇಂಜಿನಿಯರಿಂಗ್, ಕಾನೂನು, ಐ ಐ ಟಿ, ಎನ್ ಐ ಟಿ ಗಳಲ್ಲಿ ಪದವಿ ಪಡೆದು ಒಳ್ಳೆಯ ನೌಕರಿ ಮಾಡುತ್ತಿದ್ದು ಕೆಲಸದ ಒತ್ತಡ ಭರಿಸಲಾಗದೆ ಪ್ರಕೃತಿಯ ಜೊತೆಯಲ್ಲಿ ಜೀವಿಸುವ ಆಶಯದಿಂದ ಸಾವಯವ ಕೃಷಿಗೆ ಮನಸ್ಸು ಮಾಡಿರುವುದು ಹೈನುಗಾರಿಕೆಯಲ್ಲಿ ನೆಮ್ಮದಿ ಕಾಣಲು ಬಯಸುವವರ ಸಂಖ್ಯೆ ಇಂದು ಹೆಚ್ಚಾಗಿದೆ.

ಈ ಹಿಂದೆ ನಮ್ಮ ಹಿರಿಯರು ದಿನಕ್ಕೆ ಎರಡು ಹೊತ್ತು ಮಾತ್ರ ಆಹಾರ ಸೇವಿಸುತ್ತಿದ್ದು ಬದಲಾದ ಕಾಲಘಟ್ಟದಲ್ಲಿ ದಿನದ ಮೂರು ಹೊತ್ತು ಆಹಾರ ಸೇವನೆ, ಸದಾ ಏನನ್ನಾದರೂ ತಿನ್ನುವುದು ಚಹಾ ಕಾಫಿ ಸತತವಾಗಿ ಕುಡಿಯುವುದು ರೂಢಿಯಾಗಿತ್ತು ಪರಿಣಾಮವಾಗಿ ಆರೋಗ್ಯದಲ್ಲಿ ವಿಪರೀತ ಏರಿಳಿತಗಳನ್ನು ಕಾಣುತ್ತಿರುವ ಜನರು ಇದೀಗ ಮತ್ತೆ ಇಂಟರ್ಮಿಟೆಂಟ್ ಫಾಸ್ಟಿಂಗ್ ಎಂಬ ಹೆಸರಿನಲ್ಲಿ ನಮ್ಮ ಪೂರ್ವಜರು ಸೇವಿಸುತ್ತಿದ್ದ ರೀತಿಯಲ್ಲಿಯೇ ಆಹಾರ ಸೇವನೆಗೆ ಮುಂದಾಗಿದ್ದಾರೆ. ಕ್ಯಾನ್‌ಗಳಲ್ಲಿ ಸಂಗ್ರಹಿಸಲ್ಪಟ್ಟ, ತಂಗಳುಪೆಟ್ಟಿಗೆಗಳಲ್ಲಿ ಇಡಲ್ಪಟ್ಟ ಆಹಾರ ಪದಾರ್ಥಗಳು ಸೇವಿಸಲು ಯೋಗ್ಯವಲ್ಲ ಎಂಬ ಕಾರಣದಿಂದ ಅವುಗಳನ್ನು ಸಂಗ್ರಹಿಸಿ ಇಡುವುದನ್ನು ತಪ್ಪಿಸಲು ಅವಶ್ಯವಿದ್ದಷ್ಟೇ ಅಡುಗೆ ಮಾಡುವುದನ್ನು ರೂಢಿಸಿಕೊಂಡಿದ್ದಾರೆ.

ಈ ಹಿಂದೆ ಮಣ್ಣಿನಲ್ಲಿ ಕೆಸರಿನಲ್ಲಿ, ಹೊಲಗದ್ದೆಗಳಲ್ಲಿ ಕೆರೆ ಬಾವಿಗಳಲ್ಲಿ ತಾವು ಚಿಕ್ಕವರಿದ್ದಾಗ ಆಟವಾಡುತ್ತಿದ್ದ ಪಾಲಕರೇ ತಮ್ಮ ಮಕ್ಕಳಿಗೆ ಬಿಸಿಲಿಗೆ ಹೋದರೆ ಬಣ್ಣ ಸುಡುತ್ತದೆ, ಹೊರಗೆ ಆಡಿದರೆ ಕೈಕಾಲಿಗೆ ಪೆಟ್ಟು ಮಾಡಿಕೊಳ್ಳಬಹುದು, ಈಜಲು ಹೋದರೆ ನೀರಲ್ಲಿ ಮುಳುಗಬಹುದು ಎಂಬ ನೆವಗಳನ್ನು ಒಡ್ಡಿ ಮಕ್ಕಳನ್ನು ಮನೆಯ ನಾಲ್ಕು ಗೋಡೆಗಳಲ್ಲಿ ಕೂಡಿಹಾಕಿ ಅಯ್ಯೋ! ಯಾಕಾದ್ರೂ ರಜೆ ಬರುತ್ತೋ ಮಕ್ಕಳು ಮನೆಯಲ್ಲಿ ಕಾಡುತ್ತಾರೆ ಎಂದು ಹೇಳುತ್ತಾರೆ. ಇದೀಗ ಅದೇ ಪಾಲಕರು ವಿಲೇಜ್ ರೆಸ್ಟೋರೆಂಟ್, ಹಳ್ಳಿ ಮನೆ, ಗ್ರಾಮೀಣ ಬದುಕಿನ ಚಿತ್ರಣಗಳನ್ನು ನೋಡಲು ತಮ್ಮ ಮಕ್ಕಳನ್ನು ಕರೆದೊಯ್ಯುತ್ತಿದ್ದಾರೆ. ಮಕ್ಕಳಿಗೆ ಕೆಸರಿನಲ್ಲಿ ಆಡಿದರೆ ಇನ್ಫೆಕ್ಷನ್ ಆಗುತ್ತಿದೆ ಎಂದು ಗೋಳಾಡುತ್ತಿದ್ದವರು ಇದೀಗ ಮಕ್ಕಳಲ್ಲಿ ರೋಗನಿರೋಧಕ ಶಕ್ತಿ ಹೆಚ್ಚಾಗಲು, ಇಮ್ಯುನಿಟಿ ಬೆಳೆಯಲು ಮಣ್ಣಿನ ಆಟ ಆಡಲು ಪ್ರೋತ್ಸಾಹಿಸುತ್ತಿರುವುದು ತುಸು ಒಳ್ಳೆಯ ಬೆಳವಣಿಗೆ. ಅವಿಭಕ್ತ ಕುಟುಂಬಗಳಿಂದ ವಿಭಕ್ತ ಕುಟುಂಬಗಳಾಗಿ ಬದುಕುತ್ತಿರುವ ಹಲವಾರು ಕುಟುಂಬಗಳು ತಮ್ಮ ಹಿರಿಯರೊಂದಿಗೆ ಒಳ್ಳೆಯ ಬಾಂಧವ್ಯವನ್ನು ಇಟ್ಟುಕೊಳ್ಳುತ್ತಿ ರುವುದು ಸಾಮಾಜಿಕವಾಗಿ ಒಳ್ಳೆಯ ಬೆಳವಣಿಗೆಯಾಗಿದೆ. ತುಸು ಹೆಚ್ಚಿರಲಿ ಕಡಿಮೆ ಇರಲಿ ಪರವಾಗಿಲ್ಲ ಹಿಮ್ಮುಖ ಬೆಳವಣಿಗೆ ಆಶಾದಾಯಕವಾಗಿರಲಿ...

---

## ಕವಿ ಮನಸು

### ಕಲ್ಪವೃಕ್ಷದ ನಾಡು ಕರುನಾಡು

ಕಪ್ಪು ಮಣ್ಣಿನ ಕಲ್ಪವೃಕ್ಷದ ನಾಡು
ಮಲೆನಾಡ ಸೊಬಗಿನ ಶ್ರೀಗಂಧದ ಬೀಡು
ಹಲವು ಕವಿರತ್ನರು ಇರುವ ಗೂಡು
ಕೇಳಿ ಆನಂದಿಸಿ ಕನ್ನಡ ನುಡಿಯ ಹಾಡು

ಸಾವಿರಾರು ವರ್ಷಗಳ ಇತಿಹಾಸವಿರುವ
ಭಾಷೆಯು
ಎಂಟು ಜ್ಞಾನಪೀಠ ಪಡೆದ ನಲ್ಮೆಯ
ಹಿರಿಮೆಯು
ಬೇಲೂರು ಹಳೇಬೀಡು ಹಂಪಿಯ
ಶಿಲ್ಪಕಲೆಯು
ವಿವಿಧತೆಯಲಿ ಏಕತೆಯ ಸಂಸ್ಕೃತಿಯ
ಪರಂಪರೆಯು

ಬಳಸಿದಷ್ಟು ಬೆಳೆಯುವ ಭಾಷೆ ಕನ್ನಡ
ಮಾತನಾಡಿದಷ್ಟು ಮೆರುಗು ಬರುವ ಭಾಷೆ
ಕನ್ನಡ
ಬರೆದಷ್ಟು ಭಾವನೆ ಹೆಚ್ಚಾಗುವ ಭಾಷೆ
ಕನ್ನಡ
ಓದಲು ಬಾರದವರಿಗೂ ಅರ್ಥವಾಗುವ
ಭಾಷೆ ಕನ್ನಡ

ಕರುನಾಡಿನ ನೀರು ದೇವರ ತೀರ್ಥದಂತೆ
ಈ ನೆಲದ ಅನ್ನ ಪವಿತ್ರ ಪ್ರಸಾದದಂತೆ
ಕರ್ನಾಟಕದಲಿ ನಡೆದರೆ ದೇವಸ್ಥಾನದಲಿ
ನಡೆದಂತೆ
ಈ ಪುಣ್ಯ ಭೂಮಿಯಲಿ ಮಲಗಿದರೆ
ಸ್ವರ್ಗದಲಿ ಮಲಗಿದಂತೆ

ಆಗದಿರೋಣ ನವೆಂಬರ್ ಒನ್
ಕನ್ನಡಿಗರು
ಆಗೋಣ ನಂಬರ್ ಒನ್ ಕನ್ನಡಿಗರು
ನೀರು ಕೇಳಿದರೆ ಹಾಲು ಕೊಡುವ
ಹೃದಯವಂತರು
ತಾಯಿ ಭುವನೇಶ್ವರಿಯ ಅನುಗ್ರಹದ
ಪುಣ್ಯವಂತರು

ಕನ್ನಡವೆಂದರೆ ಬರಿ ಅಕ್ಷರವಲ್ಲ ಅಮೃತವು
ಕನ್ನಡವೆಂದರೆ ಬರಿ ಮಾತುಗಳಲ್ಲ
ಮಾಣಿಕ್ಯವು
ಕನ್ನಡವೆಂದರೆ ಬರಿ ಬರಹವಲ್ಲ ಭಾಗ್ಯವು
ಕನ್ನಡವೆಂದರೆ ಬರಿ ಪದವಲ್ಲ
ಪಂಚಾಮೃತವು

– **ಮುತ್ತು ಯ.ವಡ್ಡರ,** ಶಿಕ್ಷಕರು,
ಬಾಗಲಕೋಟ

---

## ಮೀನುಗಾರಿಕೆ ಇಲಾಖೆ: ಮತ್ಸ್ಯವಾಹಿನಿ ವಾಹನಗಳಿಗಾಗಿ ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಬಳ್ಳಾರಿ**

ಮೀನುಗಾರಿಕೆ ಇಲಾಖೆಯ ವತಿಯಿಂದ ಪ್ರಧಾನಮಂತ್ರಿ ಮತ್ಸ್ಯಸಂಪದ ಯೋಜನೆಯಡಿ ಪರಿಸರ ಸ್ನೇಹಿ ಕಿಯೋಸ್ಕ್ ಮತ್ಸ್ಯವಾಹಿನಿ ಯೋಜನೆಯಡಿ ಅರ್ಹ ಫಲಾನುಭವಿಗಳಿಗೆ ಮತ್ಸ್ಯವಾಹಿನಿ ವಾಹನಗಳನ್ನು ನೀಡಲು ಅರ್ಜಿ ಆಹ್ವಾನಿಸಲಾಗಿದೆ ಎಂದು ಮೀನುಗಾರಿಕೆ ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ.

ಮೀನು ಮಾರಾಟಗಾರರು, ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ ನಿಯಮಿತ ಮಂಗಳೂರು ಪ್ರಾಂಚೈಸಿಗಳು, ಸರ್ಕಾರದ ವಿವಿಧ ಕೌಶಲ್ಯ ಅಭಿವೃದ್ಧಿ ಯೋಜನೆಯಡಿ ತರಬೇತಿ ಪಡೆದವರು, ಮೀನುಗಾರರ ಉತ್ಪಾದಕ ಸಂಸ್ಥೆಗಳು, ಮೀನುಗಾರಿಕೆ ಸಹಕಾರ ಸಂಘಗಳು, ಮಹಿಳಾ ಸ್ವಸಹಾಯ ಗುಂಪುಗಳು, ನಿರುದ್ಯೋಗಿ ಯುವಕ–ಯುವತಿಯರು ಅರ್ಹರಾಗಿರುತ್ತಾರೆ.

ಪ್ರಧಾನಮಂತ್ರಿ ಮತ್ಸ್ಯಸಂಪದ ಯೋಜನೆಯ ಫಲಾನುಭವಿಗಳಿಂದ ಮಾಹೆಯಾನ ರೂ.3000 ಶುಲ್ಕದಂತೆ ಪರವಾನಗಿ ಮುಖಾಂತರ ಮತ್ಸ್ಯವಾಹಿನಿ ವಾಹನಗಳನ್ನು ನೀಡಲಾಗುತ್ತದೆ. ಅರ್ಜಿದಾರರು ಸಾಮಾನ್ಯ ವರ್ಗ ರೂ.1 ಲಕ್ಷ ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಮಹಿಳಾ ವರ್ಗದವರು ರೂ.50 ಸಾವಿರ ಪ್ರಾರಂಭಿಕ ಭದ್ರತಾ ಠೇವಣಿ ಪಾವತಿಸಬೇಕು. ಅರ್ಜಿ ಸಲ್ಲಿಸಲು ನ.11 ಕೊನೆಯ ದಿನವಾಗಿದೆ.

ಹೆಚ್ಚಿನ ಮಾಹಿತಿಗಾಗಿ ಬಳ್ಳಾರಿ ಮೀನುಗಾರಿಕೆ ಸಹಾಯಕ ನಿರ್ದೇಶಕ ಮೊ.8722574158, ಸಂಡೂರು ಮೀನುಗಾರಿಕೆ ಸಹಾಯಕ ನಿರ್ದೇಶಕ ಮೊ.7204911897, ಬಳ್ಳಾರಿ ಮೀನುಗಾರಿಕೆ ಉಪ ನಿರ್ದೇಶಕರ ಮೊ.9449593156 ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

---

## ಬಂಜಾರ ಯುವತಿಯರ ದೀಪಾವಳಿ ಸಂಭ್ರಮ



**ಮೊದಲ ಪುಟದಿಂದ**

ಬಂದಿರುತ್ತಾರೆ ಹಾಗೂ ವಿಶೇಷ ಎಂದರೆ ಈ ಸಮುದಾಯವೂ. ಪ್ರಕೃತಿ ಆರಾಧಕರಾಗಿದ್ದಾರೆ. ಮಾರನೇ ದಿನ ತಾಂಡಾದ ಯುವತಿಯರೆಲ್ಲ ಸೇರಿ ಹೊಲ ಗದ್ದೆಗಳಿಗೆ ತೆರಳಿ ಅಲ್ಲಿನ ಲಂಬಾಡಿ ಫುಲ್ ಲಾವಣ್ಯ ಫುಲ್ (ತಂಗಡಿ ಹಾಗೂ ಬಂದರಿಕೆ) ಹೂಗಳನ್ನು ಪುಟ್ಟಿಯಲ್ಲಿ ಇಟ್ಟುಕೊಂಡು ಹಾಡುತ್ತಾ ಕುಣಿಯುತ್ತ ದಾರಿ ಮಧ್ಯೆ ಮದುವೆ ಖಾಯಂ ಅದ ಯುವತಿಯರು ಒಬ್ಬರಿಗೆ ಒಬ್ಬರು ತಬ್ಬಿಕೊಂಡು ತಮ್ಮ ಭಾಷೆಯಲ್ಲಿ ಹಾಡುತ್ತ ನೋವನ್ನು ತೋಡಿಕೊಳ್ಳುತ್ತಾರೆ. ತಾಂಡಾದ ಹಿರಿಯರೆಲ್ಲ ಅವರನ್ನು ಬರಮಾಡಿಕೊಂಡು ಆಶೀರ್ವದಿಸುತ್ತಾರೆ. ನಂತರ ಪ್ರತಿ ಮನೆ ಮನೆಗೆ ಸಗಣಿ ಉಂಡೆ ಮಾಡಿ ಅದರಲ್ಲಿ ಹೂಗಳನ್ನಿಟ್ಟು ನಾನು ಹುಟ್ಟಿದ ಈ ನನ್ನ ತವರೂರಿನ ದೀಪ ಸದಾ ಬೆಳಗುತ್ತಿರಲಿ ಎಂದು ಆ ಮನೆಯ ಪ್ರತಿ ಸದಸ್ಯರ ಒಳಿತನ್ನು ಬಯಸುವ ಆ ಸಹೋದರಿಯರ ಪ್ರೀತಿಗೆ ಕುಟುಂಬದ ಸಹೋದರರೂ ಹೆಮ್ಮೆ ಪಡುತ್ತಾರೆ ಎನ್ನುತ್ತಾರೆ ಸಮುದಾಯದ ಮುಖಂಡ ಅಲೋಕ್ ನಾಯ್ಕ್.

---

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

HAMPI TIMES MARGADARSHI

ಮನಸ್ಸು ಮಾಡು - ಕರ್ತವ್ಯ ನಿಷ್ಠನಾಗು - ಕಾದು ನೋಡು

ಹಂಪಿ ಟೈಮ್ಸ್ ಇ–ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ನಿನ್ನ ಏಳಿಗೆ ನಿನ್ನ ಶ್ರಮ

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಕನ್ನಡ

### ವಿಷಯ : ಕನ್ನಡ (ಪ್ರ.ಭಾ) ಗದ್ಯ – ಯುದ್ಧ (ಮುಂದುವರೆದ ಭಾಗ)

**ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ.**

**1. "ದಯವಿಟ್ಟು ಬಾಗಿಲು ತೆಗೆಯಿರಿ. ನಾನು ಗಾಯಗೊಂಡಿದ್ದೇನೆ"**

**ಆಯ್ಕೆ–** ಈ ವಾಕ್ಯವನ್ನು ಶ್ರೀಮತಿ ಸಾರಾ ಅಬೂಬಕರ್ ಅವರು ರಚಿಸಿರುವ' ಚಪ್ಪಲಿಗಳು 'ಕಥಾ ಸಂಕಲನದಿಂದ ಆಯ್ದ 'ಯುದ್ಧ' ಎಂಬ ಗದ್ಯ ಪಾಠದಿಂದ ಆರಿಸಲಾಗಿದೆ.

**ಸಂದರ್ಭ–** ಯುದ್ಧವಿಮಾನ ಸ್ಫೋಟದಿಂದ ಗಾಯಗೊಂಡು ಸಮುದ್ರಕ್ಕೆ ಬಿದ್ದು ಕತ್ತರಲಿನಲ್ಲೇ ಈಜಿ ದಡ ಸೇರಿ, ದಡದಲ್ಲೇ ಇದ್ದ ಮಂದ ಬೆಳಕಿನ ಮನೆಯ ಒಳಗೆ ತೆವಳುತ್ತಾ ಬಂದು ಬಾಗಿಲನ್ನು ಬಡಿಯುವ ಸಂದರ್ಭದಲ್ಲಿ ಸೇನಾವೈದ್ಯನಾದ ರಾಹಿಲನು ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ–** ಸೇನಾ ವೈದ್ಯರಾದ ರಾಹಿಲನ ದಯನೀಯ ಸ್ಥಿತಿ ಹೇಗಾದರೂ ಸರಿ ರಕ್ಷಣೆಯನ್ನು ಪಡೆದು ಜೀವ ಉಳಿಸಿ ಕೊಳ್ಳಬೇಕೆಂಬ ಹಂಬಲ ಈ ಮಾತಿನಲ್ಲಿ ಅಭಿವ್ಯಕ್ತಗೊಂಡಿದೆ.

**2. "ನಾನಾಕೆಯನ್ನು ಪರೀಕ್ಷಿಸುವೆ , ಬಿಸಿನೀರು ಸಿದ್ಧಪಡಿಸಿ"**

**ಆಯ್ಕೆ–** ಈ ವಾಕ್ಯವನ್ನು' ಶ್ರೀಮತಿ ಸಾರಾ ಅಬೂಬಕರ್' ಅವರ' ಚಪ್ಪಲಿಗಳು ಕಥಾಸಂಕಲನದಿಂದ 'ಯುದ್ಧ'ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ–** ಮುದುಕಿಯ ಸೊಸೆಯು ಹೆರಿಗೆಯ ನೋವಿನಿಂದ ನರಳುವುದನ್ನು ನೋಡಿ ಆಕೆಯನ್ನು ಪರೀಕ್ಷಿಸಲು ಮುದುಕಿಯೊಡನೆ ಕೋಣೆಗೆ ಹೋದ ಸಂದರ್ಭದಲ್ಲಿ ಸೇನಾ ವೈದ್ಯರಾದ ರಾಹಿಲನು ಈ ಮಾತನ್ನು ಮುದುಕಿಗೆ ಹೇಳುತ್ತಾನೆ.

**ಸ್ವಾರಸ್ಯ–** ತಾನು ಗಾಯಗೊಂಡು ಕಷ್ಟದಲ್ಲಿದ್ದರೂ ಗರ್ಭಿಣಿಯೊಬ್ಬಳನ್ನು ಪರೀಕ್ಷಿಸಲು ಮುಂದಾದ ವೈದ್ಯನಾದ ರಾಹಿಲನ ಪರೋಪಕಾರ ಗುಣವೂ ಈ ಮಾತಿನಲ್ಲಿ ಅಭಿವ್ಯಕ್ತಗೊಂಡಿದೆ.

**3." ಯುದ್ಧಕ್ಕೆ ಹೋದ ತನ್ನ ಮಗನ ಕಣ್ಣುಗಳಂತೆ ಯೇ ಇವೆಯಲ್ಲ!"**

**ಆಯ್ಕೆ–** ಈ ವಾಕ್ಯವನ್ನು ಶ್ರೀಮತಿ ಸಾರಾ ಅಬೂಬಕರ್ ಅವರ ಚಪ್ಪಲಿಗಳು ಕಥಾ ಸಂಕಲ ನ ದಿಂದ ಆಯ್ದ 'ಯುದ್ಧ 'ಎಂಬ ಪಾಠದಿಂದ ಆಯ್ದುಕೊಳ್ಳಲಾಗಿದೆ.

**ಸಂದರ್ಭ–** ಮುದುಕಿಯು ತನ್ನ ಸೊಸೆಯನ್ನು ಬದುಕಿಸಿದ ಸೇನಾ ವೈದ್ಯನು ತಮ್ಮವನಲ್ಲ, ತನ್ನ ದೇಶಕ್ಕೆ ದ್ರೋಹ ಮಾಡಿದವನು ಎಂದು ತಿಳಿದು ರೋಷದಿಂದ ಕೆರಳಿ ಅವನ ಮುಖವನ್ನು ನೋಡಿದ ಸಂದರ್ಭದಲ್ಲಿ ಮುದುಕಿಯು ಈ ಮಾತನ್ನು ತನ್ನಲ್ಲಿಯೇ ಹೇಳಿಕೊಳ್ಳುತ್ತಾಳೆ.

**ಸ್ವಾರಸ್ಯ–** ತನ್ನ ಮನೆಯಲ್ಲಿರುವ ಸೇನಾ ವೈದ್ಯನು ಶತ್ರುದೇಶದವನು ಎಂದು ತಿಳಿದು ರೋಷಗೊಂಡ ಮುದುಕಿಯು ಮನದಲ್ಲಿ ಯುದ್ಧಕ್ಕೆ ಹೋದ ತನ್ನ ಮಗನ ಕಣ್ಣುಗಳಂತೆ ಭಾವಿಸುವುದು ಅವಳ ಹೃದಯದಲ್ಲಿರುವ ಮಾತೃ ವಾತ್ಸಲ್ಯವನ್ನು ಅಭಿವ್ಯಗೊಳಿಸುತ್ತದೆ.

**4." ನನ್ನ ಮೊಮ್ಮಗುವಿನ ಹೆಣವಿದೆ ಅಲ್ಲಿ ; ಅದನ್ನು ನೋಡಿ!"**

**ಆಯ್ಕೆ–** ಈ ವಾಕ್ಯವನ್ನು ಸಾರಾ ಅಬೂಬಕರ್ ಅವರು ರಚಿಸಿರುವ ಚಪ್ಪಲಿಗಳು ಕಥಾ ಸಂಕಲನದಿಂದ ಆಯ್ದ ಯುದ್ಧ ಎಂಬ ಗದ್ಯ ಪಾಠದಿಂದ ಆರಿಸಲಾಗಿದೆ.

**ಸಂದರ್ಭ–** ಯುದ್ಧದ ಸಂದರ್ಭದಲ್ಲಿ ಒಂದು ವಿಮಾನವನ್ನು ಹೊಡೆದುಳಿಸಿದಾಗ ಅದರಲ್ಲಿನ ವೈರಿ ಪಡೆಯವರು ಬದುಕಿ ಉಳಿದಿರುವರೇ, ಸೈನಿಕ ರು ಎಲ್ಲಾ ಮನೆಗಳಂತೆ ಮುದುಕಿಯ ಮನೆಯನ್ನುಶೋಧಿಸುತ್ತಿದ್ದಾಗ ಈ ಮಾತನ್ನು ಮುದುಕಿಯು ತನ್ನ ದೇಶದ ಸೈನಿಕರಿಗೆ ಹೇಳಿದ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ–** ಜನಸಾಮಾನ್ಯರಲ್ಲಿ ಯುದ್ಧದ ಬಗ್ಗೆ ತಿರಸ್ಕಾರವನ್ನು ಧರ್ಮ ಭಿನ್ನತೆ, ದೇಶ ಭಿನ್ನತೆ, ವೈರಿ –ಮಿತ್ರ ಎಂಬುದನ್ನು ಪರಸ್ಪರರು ಸಂಕಷ್ಟ ಪರಿಹಾರಕ್ಕೆ ರಕ್ಷಣೆಗೆ ತೊಡುಗುವ ಮಾನವೀಯ ಮೌಲ್ಯಯುತ ನಡವಳಿಕೆಗಳು ಇಲ್ಲಿ ಮನೋಜ್ಞವಾಗಿ ಮೂಡಿಬಂದಿದೆ.

**5." ನಾನು ಯುದ್ಧ ಮಾಡುವ ಮೂರ್ಖರ ಕಡೆಯವನಲ್ಲ"( ಜೂನ್–2020)**

**ಆಯ್ಕೆ–** ಈ ವಾಕ್ಯವನ್ನು ಶ್ರೀಮತಿ ಸಾರಾ ಅಬೂಬಕರ್ ಅವರ ಚಪ್ಪಲಿಗಳು ಕಥಾ ಸಂಕಲನದಿಂದ ಆಯ್ದ ಯುದ್ಧ ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ–** ಯುದ್ಧದಲ್ಲಿನ ವೈಮಾನಿಕ ದಾಳಿಯಿಂದ ಪಾರಾದ ಡಾಕ್ಟರ್ ರಾಹಿಲನು ಗಾಯಗೊಂಡು ತೆವಳುತ್ತಾ ರಕ್ಷಣೆಗಾಗಿ ಶತ್ರು ದೇಶದವರ ಮನೆಯ ಬಾಗಿಲು ಬಡಿಯುತ್ತಾನೆ. ಆಗ ಮುದುಕಿಯೊಬ್ಬಳು ಗೊಣಗಿಕೊಳ್ಳುತ್ತಾ ಬಾಗಿಲು ತೆರೆದು, ಸಮೀಪ ಬಂದು'ಯಾರಪ್ಪ ನೀನು'? ನಮ್ಮ ಕಡೆಯವನು ತಾನೇ? ಎಂದು ಭಯ ಮತ್ತು ಸಂದೇಹದಿಂದ ರಾಹಿಲನನ್ನು ಪ್ರಶ್ನಿಸುವ ಸಂದರ್ಭದಲ್ಲಿ ರಾಹಿಲ್ ನು ಮುದುಕಿಗೆ ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ–** ಜನಸಾಮಾನ್ಯರಲ್ಲಿ ಯುದ್ಧದ ಬಗ್ಗೆ ತಿರಸ್ಕಾರವನ್ನು, ದೇಶ ಭಿನ್ನತೆ, ವೈರಿ ಮಿತ್ರ ಎಂಬುದನ್ನು ಪರಿಗಣಿಸದೆ ಪರಸ್ಪರರು ಸಂಕಷ್ಟ ಪರಿಹಾರಕ್ಕೆ ರಕ್ಷಣೆಗೆ ತೊಡಗುವ ಮಾನವೀಯ ಮೌಲ್ಯಯುತ ನಡವಳಿಕೆಗಳು ಇಲ್ಲಿ ಮನೋಜ್ಞವಾಗಿ ಮೂಡಿ ಬಂದಿದೆ.

**ಸರಿಯಾದ ಪದಗಳಿಂದ ಬಿಟ್ಟ ಸ್ಥಳ ತುಂಬಿರಿ. (ಆವರಣಗಳಲ್ಲಿ ಉತ್ತರ ಕೊಡಲಾಗಿದೆ)**

1. ರಾಹಿಲನ ದೇಹದಲ್ಲಿ__________ ಸಂಚಾರವಾಯಿತು.
2. ನರಳಾಟದ ಬೆನ್ನಲ್ಲೇ ಹಿರಿಯ ಹೆಂಗಸೊಬ್ಬಳ__________ ಕೇಳಿ ಬಂತು.
3. ಮುದುಕಿ ಮತ್ತು ಸೊಸೆಯ__________ ಮನೆಯ ಮೂಲೆ ಮೂಲೆಯಲ್ಲಿ ಪ್ರತಿಧ್ವನಿಸಿತು.
4. ಯಾರಾದರೂ ಗಾಯಕೊಂಡ__________ ಈ ಕಡೆ ಬಂದಿದ್ದಾರೆಯೇ?
5. ಮನೆಯಲ್ಲೊಂದು ಪುಟ್ಟ ಮಗುವಿನ ಅಳು ಕೇಳಲು ನನ್ನ__________ ತುದಿಗಾಲಲ್ಲಿ ನಿಂತು ಕಾಯುತ್ತಿದ್ದನು.

{ 1) ಹೊಸರಕ್ತ, 2) ಸಾಂತ್ವನ, 3) ರೋಧನ 4) ಸೈನಿಕರು, 5)ಮಗನು }

www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : ಶ್ರೀ ಮಧು.ಕೆ. ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ ಸೂಲದಹಳ್ಳಿ, ಕೂಡ್ಲಿಗಿ(ತಾ) ವಿಜಯನಗರ(ಜಿ)

ಸಾಯಿಮಣಿ ಪ್ರಕಾಶನ, ಹೊಸಪೇಟೆ

ನಿರೀಕ್ಷಿಸಿ

ಆಂಗ್ಲ ಮಾಧ್ಯಮದ SSLC ವಿದ್ಯಾರ್ಥಿಗಳ ಉತ್ತಮ ಫಲಿತಾಂಶಕ್ಕಾಗಿ
ಆಯ್ದ ವಿಷಯಗಳ ಸರಳ ಅಭ್ಯಾಸಕ್ಕಾಗಿ ಸುಲಭ ಮಾರ್ಗೋಪಾಯಗಳು
ಹಂಪಿ ಟೈಮ್ಸ್ ಮಾರ್ಗದರ್ಶಿಯಲ್ಲಿ ಶೀಘ್ರದಲ್ಲೇ....!
ದಿನಪತ್ರಿಕೆ ಓದು - ಭವಿಷ್ಯದ ಬದುಕಿಗೆ ರಹದಾರಿ

ದಿನಪತ್ರಿಕೆ ಓದುವುದರಿಂದ ...
- ಭಾಷಾ ಕೌಶಲ್ಯ
- ವ್ಯಕ್ತಿತ್ವ ವಿಕಾಸ
- ಚಿಂತನೆಗಳ ವಿಸ್ತಾರ
- ಸಾಮಾನ್ಯ ಜ್ಞಾನ
- ಸಮಾಜದ ಬಗ್ಗೆ ಅರಿವು

ಹಂಪಿ ಟೈಮ್ಸ್ ಇ-ಪೇಪರ್

94486 33038 www.hampitimes.com / epaper.hampitimes.com Vijayanagara hampitimes@gmail.com


## ನಿತ್ಯ ಪಂಚಾಂಗ

ಮಾಸ: ಕಾರ್ತಿಕ । ಸಂವತ್ಸರ: ಕ್ರೋಧಿ

**05–11–2024 – ಮಂಗಳವಾರ**

| | |
|---|---|
| ತಿಥಿ | : ಚತುರ್ಥಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಜ್ಯೇಷ್ಠ |
| ಯೋಗ | : ಅತಿಗಂಡ |
| ಕರಣ | : ವಾಣಿಜ |
| ಸೂರ್ಯೋದಯ | : 06:35:39 |
| ಸೂರ್ಯಾಸ್ತ | : 17:45:04 |
| ರಾಹು ಕಾಲ | : 12:10–13:34 |
| ಯಮಘಂಡ ಕಾಲ | : 07:59–09:23 |
| ಗುಳಿಕ ಕಾಲ | : 10:47–12:33 |

## ತುಂಗಭದ್ರಾ ನೀರಿನ ಮಟ್ಟ



**ಸೋಮವಾರ : 04–11–2024**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1632 ಅಡಿ |
| ಒಳ ಹರಿವು | 15632 ಕ್ಯುಸೆಕ್ |
| ಹೊರ ಹರಿವು | 15116 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 101.773 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

**ಕಳೆದ ವರ್ಷ ಇದೇ ದಿನ**

| | |
|---|---|
| ಇಂದಿನ ಮಟ್ಟ | 1605.65 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 8976 ಕ್ಯುಸೆಕ್ |
| ಸಾಮರ್ಥ್ಯ | 29.764 ಟಿಎಂಸಿ |

# ಬೆಳೆ ವಿಮೆಗೆ ನೋಂದಾಯಿಸಿಕೊಳ್ಳಿ

**ಹಂಪಿ ಟೈಮ್ಸ್ ಬಳ್ಳಾರಿ**

ಪ್ರಸ್ತಕ ಸಾಲಿನ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆಯ ಹಿಂಗಾರು ಹಾಗೂ ಮುಂಗಾರು ಹಂಗಾಮಿನ ಬೆಳೆ ವಿಮೆಗೆ ನೋಂದಾಯಿಸಲು ಬೆಳೆ ಸಾಲ ಪಡೆದ ಹಾಗೂ ಬೆಳೆ ಸಾಲ ಪಡೆಯದ ರೈತರು ಬ್ಯಾಂಕುಗಳಲ್ಲಿ ವಿಮೆ ಮಾಡಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ ಎಂದು ಜಂಟಿ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

ಹಿಂಗಾರು ಹಂಗಾಮಿನ ಗ್ರಾಮ ಪಂಚಾಯಿತಿ ಮಟ್ಟದ ನೀರಾವರಿ ಬೆಳೆ ಜೋಳ, ನೀರಾವರಿ ಮತ್ತು ಮಳೆಯಾಶ್ರಿತ ಬೆಳೆ ಕಡಲೆ ಮತ್ತು ಬೇಸಿಗೆ ಹಂಗಾಮಿನ ಗ್ರಾಮ ಪಂಚಾಯಿತಿ ಮಟ್ಟದ ನೀರಾವರಿ ಬೆಳೆಗಳಾದ ನೆಲಗಡಲೆ (ಶೇಂಗಾ), ಭತ್ತ ಹಾಗೂ ಹೋಬಳಿ ಮಟ್ಟದ ಹಿಂಗಾರು ಹಂಗಾಮಿನ ನೀರಾವರಿ ಬೆಳೆ ಮುಸುಕಿನ ಜೋಳ, ನೀರಾವರಿ/ಮಳೆಯಾಶ್ರಿತ ಬೆಳೆ ಸೂರ್ಯಕಾಂತಿ, ಕುಸುಮೆ, ಈರುಳ್ಳಿ ಮತ್ತು ಬೇಸಿಗೆ ಹಂಗಾಮಿನ ನೀರಾವರಿ ಬೆಳೆಗಳಾದ ಸೂರ್ಯಕಾಂತಿ, ಈರುಳ್ಳಿ ಜಿಲ್ಲೆಯ ಬೆಳೆಗಳಾಗಿವೆ.

**ಬೆಳೆ ವಿಮೆಗೆ ಕೊನೆಯ ದಿನ:** ಹಿಂಗಾರು ಹಂಗಾಮಿನ ಬೆಳೆಗಳಾದ ಜೋಳ, ಮುಸುಕಿನ ಜೋಳ, ಸೂರ್ಯಕಾಂತಿ, ಕುಸುಮೆ ಬೆಳೆಗಳಿಗೆ ಡಿ.16 ಆಗಿದೆ. ಅದರಂತೆ ಮಳೆಯಾಶ್ರಿತ ಬೆಳೆ ಜೋಳ ನ.15, ಕಡಲೆ ಬೆಳೆಗೆ ಡಿ.31, ಈರುಳ್ಳಿ ಬೆಳೆಗೆ ನ.30. ಬೇಸಿಗೆ ಬೆಳೆಗಳಾದ ಭತ್ತ, ನೆಲಗಡಲೆ (ಶೇಂಗಾ), ಸೂರ್ಯಕಾಂತಿ ಮತ್ತು ಈರುಳ್ಳಿ ಬೆಳೆಗಳಿಗೆ 2025 ರ ಫೆ.28 ಕೊನೆಯ ದಿನವಾಗಿದೆ. ಈ ಯೋಜನೆಯ ಲಾಭ ಪಡೆಯಲು ಯಾವುದೇ ಸ್ಥಳೀಯ ಬ್ಯಾಂಕ್/ಸಾರ್ವಜನಿಕ ಸೇವಾ ಕೇಂದ್ರಗಳಿಗೆ, ಸಮೀಪದ ರೈತ ಸಂಪರ್ಕ ಕೇಂದ್ರ, ಸಹಾಯಕ ಕೃಷಿ ನಿರ್ದೇಶಕರ ಕಚೇರಿ ಹಾಗೂ ಜಂಟಿ ಕೃಷಿ ನಿರ್ದೇಶಕರ ಕಚೇರಿಗೆ ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

# ಅನ್ನದಾತನಿಗೆ ವಕ್ಫ್ ನೋಟೀಸು ಆಕ್ರೋಶ

**ಮೊದಲ ಪುಟದಿಂದ**

ಹೊರಟಿರುವುದು ದುರಂತ. ಮಠಮಾನ್ಯಗಳಿಗೆ ಅತ್ಯಂತ ಭಕ್ತಿ ಶ್ರದ್ಧೆ ಮಾನ್ಯತೆ ನೀಡುವ ಜನರ ಮಧ್ಯೆ ಮಠಮಾನ್ಯಗಳ ಆಸ್ತಿಯನ್ನು ಕಬಳಿಸಲು ಮುಂದಾಗಿರುವ ಆಡಳಿತ ಸರ್ಕಾರದ ಹುನ್ನಾರ ಜನತೆಯ ಮನಸಿನಲ್ಲಿ ಆತಂಕ ಸೃಷ್ಟಿಸಿದೆ. ಇಂತಹ ದುಷ್ಟ ಪ್ರಯತ್ನವನ್ನು ತಡೆ ಹಿಡಿದು ವಕ್ಫ್ ಮಂಡಳಿಯನ್ನು ರದ್ದು ಮಾಡುವ ಮೂಲಕ ಜನತೆಯನ್ನ ರಕ್ಷಿಸಬೇಕು. ಇನ್ನೊಮ್ಮೆ ಇಂತಹ ಕೃತ್ಯಕ್ಕೆ ಕೈ ಹಾಕದಂತೆ ಕಠಿಣ ಕಾನೂನು ಜಾರಿ ಮಾಡಬೇಕು. ಜವಾಬ್ದಾರಿತ ಸ್ಥಾನದಲ್ಲಿರುವ ಮುಖ್ಯಮಂತ್ರಿ ಅವರು ಕೂಡ ಇಂತವರಿಗೆ ಸಾತ್ ನೀಡಿರುವುದು ತರವಲ್ಲ. ರೈತರ ತಂಟೆಗೆ ಹೋಗದಿರಿ ಎಂಬ ಕಣ್ಣೊರೆಸುವ ತಂತ್ರಗಾರಿಕೆ ಬಿಡಿ ಎಂದರು.

ಬಿಜೆಪಿ ಜಿಲ್ಲಾ ರೈತ ಮೋರ್ಚ್ ಮಾಜಿ ಅಧ್ಯಕ್ಷ ಬಾಗಳಿ ಕೊಟ್ರೇಶಪ್ಪ, ಮಾತನಾಡಿ, 'ಶಾಂತಿ, ಸಾಮರಸ್ಯದ ನಾಡಾಗಿದ್ದ ಕರ್ನಾಟಕವನ್ನು ವಕ್ಫ್ ಮಂಡಳಿ ಮೂಲಕ ರಾಜ್ಯ ಸರಕಾರವು ಆತಂಕದ ಸ್ಥಿತಿಗೆ ತಳ್ಳುತ್ತಿದೆ. ವಕ್ಫ್ ಮಂಡಳಿಯಲ್ಲಿ ಆಗುತ್ತಿರುವ ಅಕ್ರಮಗಳನ್ನು ತಡೆಯಲು ಕೇಂದ್ರ ಸರಕಾರ ವಕ್ಫ್ ಕಾಯ್ದೆಗೆ ತಿದ್ದುಪಡಿ ತರುವ ವಿಧೇಯಕ ಮಂಡಿಸಿದೆ. ಇದು ಜಾರಿಯಾಗುತ್ತದೆ ಎಂಬ ಆತಂಕದಿಂದ ವಕ್ಫ್ ಮಂಡಳಿಯು ದೇಶದಲ್ಲಿನ ಸಾರ್ವಜನಿಕ ಆಸ್ತಿ ಕಬಳಿಸುವ ಹುನ್ನಾರಕ್ಕೆ ಕೈಹಾಕಿದೆ' ಎಂದು ಆಪಾದಿಸಿದರು.

ಕಾಂಗ್ರೆಸ್ ಸರಕಾರದಿಂದ ರೈತರು ಮತ್ತು ಹಿಂದೂ ಸಮುದಾಯದವರ ಮೇಲೆ ಅನ್ಯಾಯ ನಡೆಯುತ್ತಿದೆ. ಹಲವಾರು ವರ್ಷಗಳಿಂದ ರೈತರ ವಶದಲ್ಲಿರುವ ಭೂಮಿಗೆ ಈಗ ಏಕಾಏಕಿಯಾಗಿ ನೋಟಿಸು ಕೊಡುತ್ತಿರುವುದು ಸರಿಯಲ್ಲ' ಎಂದು ಆಕ್ರೋಶವ್ಯಕ್ತಪಡಿಸಿದರು.

ವಕ್ಫ್ ಬೋರ್ಡ್ ಹೆಸರಿನಲ್ಲಿ ರೈತರ ಬದುಕಿನೊಂದಿಗೆ ಚೆಲ್ಲಾಟವಾಡುತ್ತಿರುವ ಸಚಿವ ಜಮೀರ್ ಅಹಮದ್ ಅವರನ್ನ ಗಡಿಪಾರು ಮಾಡಿ ಸೂಕ್ತ ಕಾನೂನು ಕ್ರಮ ಕೈಗೊಂಡು ಮತ್ತೆ ರೈತರಿಗೆ ಜಮೀನನ್ನ ಮರಳಿಸಿ ಎಂದು ಪ್ರತಿಭಟನೆ ನಡೆಸಿದರು. ಪ್ರತಿಭಟನೆಯಲ್ಲಿ ಓಂಕಾರ್ ಗೌಡ, ಮಂಜುನಾಥ್ ನಾಯ್ಕ್, ನಾಗರಾಜ್ ಪಾಟೀಲ್, ಉದಯಕುಮಾರ್, ಉಮೇಶ್, ಮಹೇಶ್, ಚಾರಪ್ಪ, ಬಾಗಳಿ ಕೊಟ್ರೇಶ್, ವಕೀಲ ಲಿಂಗಾನಂದ್, ನೀಲಗುಂದ ಹನುಮಂತ, ಬಿಜೆಪಿ ಮಹಿಳಾ ಮೋರ್ಚ್ ಅಧ್ಯಕ್ಷೆ ಸ್ವಪ್ನ ಮಲ್ಲಿಕಾರ್ಜುನ, ದೊಡ್ಮನಿ ಚೆನ್ನೆಶ್, ಕಡೆಮನಿ ಸಂಗಮೇಶ್, ಸೇರಿದಂತೆ ಅನೇಕರು ಇದ್ದರು.


**14** ಹಂಪಿ ಟೈಮ್ಸ್ ವೆಬ್‌ನ್ಯೂಸ್‌ಗೆ
ಭೇಟಿ ನೀಡಿ, ನಿಮ್ಮ ಮಾತೃಭಾಷೆಯಲ್ಲಿ
ಸುದ್ದಿ, ಲೇಖನ ಓದಿರಿ...
ಭಾಷೆಗಳಲ್ಲಿ www.hampitimes.com


**ರಿಟರ್ನಿಂಗ್ ಅಧಿಕಾರಿ, ವಿಜಯನಗರ ಜಿಲ್ಲಾ ಪದವಿ ಪೂರ್ವ ಕಾಲೇಜುಗಳ ನೌಕರರ ಪತ್ತಿನ ಸಹಕಾರ ಸಂಘ ನಿ,. ಹೊಸಪೇಟೆ ಹಾಗೂ ಅಧೀಕ್ಷಕರು, ಸಹಕಾರ ಸಂಘಗಳ ಉಪನಿಬಂಧಕರ ಕಾರ್ಯಾಲಯ, ಬಳ್ಳಾರಿ.**

**ಪತ್ರಿಕಾ–ಪಕಟಣೆ**

ಹೊಸದಾಗಿ ನೊಂದಣಿಯಾದ ವಿಜಯನಗರ ಜಿಲ್ಲಾ ಪದವಿ ಪೂರ್ವ ಕಾಲೇಜುಗಳ ನೌಕರರ ಪತ್ತಿನ ಸಹಕಾರ ಸಂಘ ನಿ, ಹೊಸಪೇಟೆ ಇದರ ಆಡಳಿತ ಮಂಡಲಿ ನಿರ್ದೇಶಕರ ಸಾಮಾನ್ಯ ಚುನಾವಣೆ ಜರುಗಿಸಲು ವೇಳಾಪಟ್ಟಿ ಪ್ರಕಟಿಸಲಾಗಿದ್ದು, ನಾಮಪತ್ರ ಸಲ್ಲಿಸಲು ಕೊನೆಯ ದಿನಾಂಕ: 10–11–2024 ಮಧ್ಯಾಹ್ನ 3–00 ಗಂಟೆಯವರೆಗೆ, ದಿನಾಂಕ: 11–11–2024 ರಂದು ನಾಮಪತ್ರಗಳ ಪರಿಶೀಲನೆ ಹಾಗೂ ದಿನಾಂಕ: 12–11–2024 ರಂದು ಮಧ್ಯಾಹ್ನ 3–00 ಗಂಟೆಯವರೆಗೆ ನಾಮಪತ್ರ ವಾಪಸ್ಸು ಪಡೆಯಲು ಕೊನೆಯ ದಿನವಾಗಿರುತ್ತದೆ. ಮತದಾನ ಅವಶ್ಯವಾದಲ್ಲಿ ದಿನಾಂಕ:17–11–2024 ರಂದು ಸಂಘದ ಕಛೇರಿಯಲ್ಲಿ ಮತದಾನ ನಡೆಯಲಿದ್ದು, ಸಂಘದ ಸದಸ್ಯರುಗಳಿಗೆ ಚುನಾವಣಾ ವೇಳಾಪಟ್ಟಿಯನ್ನು ಕಳುಹಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ರಿಟರ್ನಿಂಗ್ ಅಧಿಕಾರಿಯನ್ನು ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆಯ ಮೂಲಕ ತಿಳಿಸಿದೆ.

**ಸಹಿ/– (ಪರಮೇಶ ಬಿ.) ರಿಟರ್ನಿಂಗ್ ಅಧಿಕಾರಿ**
ವಿಜಯನಗರ ಜಿಲ್ಲಾ ಪದವಿ ಪೂರ್ವ ಕಾಲೇಜುಗಳ ನೌಕರರ
ಪತ್ತಿನ ಸಹಕಾರ ಸಂಘ ನಿ. ಹೊಸಪೇಟೆ ಹಾಗೂ
ಅಧೀಕ್ಷಕರು ಸ.ಸಂ.ಉ.ನಿ, ಕಛೇರಿ, ಬಳ್ಳಾರಿ,

ಸ್ಥಳ:– ಹೊಸಪೇಟೆ.
ದಿನಾಂಕ:02–11–2024


To reach a wider audience
at the lowest possible cost
PUBLISH YOUR ADVERTISEMENT IN
HAMPI TIMES DAILY NEWS PAPER

Hampi Times E-Paper Daily Readers @
Karnataka, Maharastra, Kerala, Telangana, Tamilnadu, Andrapradesh, Uttar Pradesh, Gujarat, Haryan, Odisha and other places.
In International: US , UK, Sweden , Canada and others...












SCAN & READ
HAMPI TIMES
E-PAPER

ವಿಜಯನಗರ ಜಿಲ್ಲೆಯ ಹೆಮ್ಮೆ
ಸ್ಥಳೀಯ ನಂ.1 ಕನ್ನಡ ದಿನಪತ್ರಿಕೆ
ಹಂಪಿ ಟೈಮ್ಸ್ ಇ-ಪೇಪರ್
ವಿಶ್ವದ ವಿವಿಧೆಡೆ ಇರುವ
95000+
ಕನ್ನಡ ಓದುಗರ ಕೈಯಲ್ಲಿ...

- Offers for Packege Ads
- free Creative Desgin
- Economical Ads Rates
- Combo Offers Available

CALL US NOW 94486 33038

www.hampitimes.com/epaper.hampitimes.com